# ಕೃಷಿ ವಾರ್ತಾ ಸೇವೆಗಳು

**ಪೀಠಿಕೆ :** ಆಧುನಿಕ ಕೃಷಿ ತಂತ್ರಜ್ಞಾನವನ್ನು ರಾಜ್ಯದ ರೈತ ಬಾಂಧವರಿಗೆ ತಲುಪಿಸುವಲ್ಲಿ ವಾರ್ತಾ ಸೇವೆಗಳಾದ ದಿನಪತ್ರಿಕೆ ಮತ್ತು ಎಲೆಕ್ಟ್ರಾನಿಕ್ಸ್ ಮಾಧ್ಯಮಗಳು ಹಾಗೂ ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ. ಈ ದಿಸೆಯಲ್ಲಿ ಕೃಷಿ ವಾರ್ತಾ ವಿಭಾಗದಡಿ ಈ ಕೆಳಕಂಡ ನಾಲ್ಕು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ಕೃಷಿ ವಾರ್ತಾ ಘಟಕ
2. ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ (ರಾಜ್ಯ ಮತ್ತು ಜಿಲ್ಲಾ ವಲಯ )
3. ರೈತರಿಗೆ ಉತ್ಪಾದನಾ ಬಹುಮಾನಗಳು (ಕೃಷಿ ಪ್ರಶಸ್ತಿ )
4. ಕೃಷಿ ಪಂಡಿತ ಪ್ರಶಸ್ತಿ

**ಕೃಷಿ ವಾರ್ತಾ ಘಟಕಃ - ಲೆ.ಶೀ. 2401-00-109-0-21 ಉಪ ಶೀರ್ಷಿಕೆ : 059 ಇತರೆ ವೆಚ್ಚ**

ಉದ್ದೇಶಃ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ನವೀನ ತಾಂತ್ರಿಕತೆಯನ್ನು ವಿಸ್ತರಣಾ ಕಾರ್ಯಕರ್ತರಿಗೆ ಹಾಗು ರೈತ ಸಮುದಾಯಕ್ಕೆ ವಿಸ್ತರಣಾ ಚಟುವಟಿಕೆಗಳಿಗೆ ಪೂರಕವಾಗುವಂತೆ ವರ್ಗಾವಣೆ ಮಾಡುವುದೇ ಈ ಯೋಜನೆಯ ಮುಖ್ಯ ಉದ್ದೇಶ. ಇದಕ್ಕಾಗಿ ಇಲಾಖೆಯು ರಾಜ್ಯ ಮಟ್ಟದಿಂದ ತಾಲ್ಲೂಕು ಮಟ್ಟದವರೆಗೆ ಒಂದು ಉತ್ತಮ ವ್ಯವಸ್ಥಿತ ವಾರ್ತಾ ಹಂದರವನ್ನು ಹೊಂದಿರುತ್ತದೆ. ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ವಿಶೇಷ ಸಾಹಿತ್ಯಗಳ ಪ್ರಕಟಣೆ ಹಾಗೂ ದೃಶ್ಯ ಶ್ರವಣ ಸಾಧನಗಳನ್ನು ಹೊರ ತರಲಾಗುತ್ತಿದೆ.

ಇದಲ್ಲದೆ ರಾಜ್ಯದ ರೈತ ಬಾಂಧವರ ಉಪಯೋಗಕ್ಕಾಗಿ ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳ ಮೂಲಕ ಪ್ರತಿದಿನ ಮುಂಜಾನೆ ಮತ್ತು ಸಂಜೆ ವೇಳೆಯಲ್ಲಿ ರೈತರಿಗೆ ಸಲಹೆ ಬಿತ್ತರಿಸಲಾಗುತ್ತಿದೆ ಮತ್ತು ಆಗಿಂದಾಗ್ಗೆ ನೇರ ಫೋನ್ ಇನ್ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಅಲ್ಲದೇ ರಾಜ್ಯದ ರೈತ ಬಾಂಧವರ ಮಾಹಿತಿಗಾಗಿ ಆಗಿಂದಾಗ್ಗೆ ಪತ್ರಿಕಾ ಪ್ರಕಟಣೆಗಳ್ನು ಸಹ ನೀಡಲಾಗುತ್ತಿದೆ.

2009-10ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.50.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

## ಭೌತಿಕ ಮತ್ತು ಆರ್ಥಿಕ ಗುರಿಗಳು

### ಕೇಂದ್ರ ಕಛೇರಿಯ ಭೌತಿಕ ಗುರಿ

| ಕ್ರ.ಸಂ | ಅಂಶಗಳು | ಗುರಿ ವಿವರಗಳು |
|---|---|---|
| ಅ. | **ಪ್ರಕಟಣೆಗಳು** | |
| | ಭಿತ್ತಿ ಪತ್ರಿಕೆ | 12 ಸಂಖ್ಯೆ |
| | ಪುಸ್ತಕಗಳು | 2 ಸಂಖ್ಯೆ |
| | ತ್ರೈ ಮಾಸಿಕ ಪತ್ರಿಕೆ | 4 ಸಂಖ್ಯೆ |
| | ಹಸ್ತ ಪತ್ರಿಕೆಗಳು : ಮಡಿಸಿದ ಕರಪತ್ರ | 4 ಸಂಖ್ಯೆ |
| | ಅಗ್ರಿ ಡಾಕ್ಟರ್ಸ್ ಡೈರಿ | ಅವಶ್ಯಕತೆಗನುಗುಣವಾಗಿ |
| | ಸಾಕ್ಷ್ಯಚಿತ್ರ : ವೀಡಿಯೋ ಚಿತ್ರ | 2 ಸಂಖ್ಯೆ |
| | ವಿಶಿಷ್ಟ ಲೇಖನಗಳು | 2 ಸಂಖ್ಯೆ |

| | | |
|---|---|---|
| ಆ. | **ಪತ್ರಿಕೆಗಳ ಮೂಲಕ ಪ್ರಚಾರ:**<br>1. ಪತ್ರಿಕಾ ಪ್ರಕಟಣೆಗಳು<br>2. ಪತ್ರಿಕೆ ಹಾಗೂ ಇತರೆ ಪ್ರಮುಖ ನಿಯತಕಾಲಿಕೆಗಳಿಗೆ ಲೇಖನಗಳು<br>3. ಪ್ರತಿಷ್ಠಿತ ಜಾಹೀರಾತು | ಅವಶ್ಯಕತೆಗೆ ತಕ್ಕಂತೆ |
| ಇ | **ಆಕಾಶವಾಣಿ -**<br>1. ರೈತರಿಗೆ ಸಲಹೆ<br>2. ಫೋನ್-ಇನ್ ಕಾರ್ಯಕ್ರಮ | <br>365<br>12 (ತಿಂಗಳಿಗೊಂದರಂತೆ) |
| ಈ | **ದೂರದರ್ಶನ:**<br>ಫೋನ್ - ಇನ್ ಕಾರ್ಯಕ್ರಮ<br>ರೈತರಿಗೆ ಸಲಹೆ | <br>12 (ತಿಂಗಳಿಗೊಂದರಂತೆ)<br>365 |
| ಉ | **ಪ್ರದರ್ಶನ ವಸ್ತುಗಳ ನಿರ್ಮಾಣ ಹಾಗು ವಸ್ತು ಪ್ರದರ್ಶನ ಏರ್ಪಡಿಸುವುದು**<br>ಪ್ರದರ್ಶನ ವಸ್ತುಗಳು, ಸ್ತಬ್ಧ ಚಿತ್ರ ನಿರ್ಮಾಣ ಮಾಡುವಿಕೆ<br>ವಸ್ತು ಪ್ರದರ್ಶನಗಳನ್ನು ಏರ್ಪಡಿಸುವುದು<br>ಛಾಯಾಚಿತ್ರಗಳನ್ನು ತೆಗೆಯುವುದು | ಅವಶ್ಯಕತೆಗೆ ತಕ್ಕಂತೆ |
| ಊ | ವೀಡಿಯೋ ಚಿತ್ರ ನಿರ್ಮಾಣ | ಬೇಡಿಕೆಗನುಗುಣವಾಗಿ |
| ಋ | ಮುದ್ರಣಾಲಯ ನಿರ್ವಹಣೆ | ಅಗತ್ಯಾನುಸಾರ |

**2 ಪ್ರತಿ ಜಿಲ್ಲೆಯ ಭೌತಿಕ ಗುರಿ**

| ಕ್ರ.ಸಂ | ಅಂಶಗಳು | ಗುರಿ |
|---|---|---|
| ಅ | **ಪ್ರಕಟಣೆಗಳು**<br>ಹಸ್ತ/ ಮಡಿಕೆ ಪತ್ರಿಕೆ<br>ಭಿತ್ತಿ ಪತ್ರಗಳು<br>ಕಿರು ಪುಸ್ತಕಗಳು<br>ಗ್ರಂಥಾಲಯಕ್ಕೆ ಪುಸ್ತಕಗಳು | <br>12<br>03<br>02<br>ಅಗತ್ಯಾನುಸಾರ |
| ಆ | **ಪತ್ರಿಕೆಗಳ ಮೂಲಕ ಪ್ರಚಾರ**<br>1. ಪತ್ರಿಕಾ ಪ್ರಕಟಣೆಗಳು<br>2.ಪತ್ರಿಕಾ ಪ್ರತಿನಿಧಿಗಳ ಪ್ರವಾಸವನ್ನು ವ್ಯವಸ್ಥೆಗೊಳಿಸುವುದು<br>3.ಪತ್ರಿಕೆ ಹಾಗೂ ಇತರೆ ಪ್ರಮುಖ ನಿಯತಕಾಲಿಕೆ ಗಳಿಗೆ ಲೇಖನಗಳನ್ನು ಒದಗಿಸುವುದು | <br>24<br>ಅಗತ್ಯಾನುಸಾರ<br><br>04 |

| | | |
|---|---|---|
| ಇ | **1. ಆಕಾಶವಾಣಿ**<br>ಶಿವಮೊಗ್ಗ<br>ಧಾರವಾಡ<br>ಗುಲ್ಬರ್ಗಾ<br><br>ಮೈಸೂರು<br>ಬೆಂಗಳೂರು<br>ಹಾಸನ<br>ಬೆಳಗಾವಿ | 365 ಇತರೆ ಜಿಲ್ಲೆಯುವರು ಅವಶ್ಯಕತೆಗೆ<br>365 ತಕ್ಕಂತೆ ರೈತರಿಗೆ ಸಲಹೆಯನ್ನು<br>365 ಸಂಬಂಧಪಟ್ಟ ಆಕಾಶವಾಣಿ ನಿಲಯಗಳಿಗೆ ಕಳುಹಿಸಿಕೊಡುವುದು<br>365<br>365<br>365<br>365 |
| ಈ | **ದೂರದರ್ಶನ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು** | ಅಗತ್ಯಾನುಸಾರ |
| ಉ | ಚಲನ ಚಿತ್ರ ಮತ್ತು ಡಿಜಿಟಲ್ ಪ್ರಾಜೆಕ್ಟರ್ ಮೂಲಕ ಪ್ರದರ್ಶನ / ಎಲ್.ಸಿ.ಡಿ. | ಅಗತ್ಯಾನುಸಾರ |
| ಊ | ಪ್ರದರ್ಶನ ವಸ್ತುಗಳ ನಿರ್ಮಾಣ, ವಸ್ತು ಪ್ರದರ್ಶನ ಹಾಗು ಕ್ಷೇತ್ರೋತ್ಸವಗಳುಃ<br>1.ಬ್ಲೋ ಅಪ್ ಚಿತ್ರಪಟಗಳು<br>2.ಪ್ರದರ್ಶನ ವಸ್ತುಗಳು<br>3.ವಸ್ತು ಪ್ರದರ್ಶನಗಳನ್ನು ಏರ್ಪಡಿಸುವುದು<br>4.ಕ್ಷೇತ್ರೋತ್ಸವಗಳಲ್ಲಿ ಭಾಗವಹಿಸುವುದು | <br><br>25<br>25<br>12<br>25 |

**3. ಪ್ರತಿ ತಾಲ್ಲೂಕಿನ ಭೌತಿಕ ಗುರಿ**

| | | |
|---|---|---|
| 1. | ಹಸ್ತ ಪತ್ರಿಕೆಗಳು ಃ ಮಡಿಸಿದ ಕರಪತ್ರ | 4 ಸಂಖ್ಯೆ |
| 2. | ರೈತರಿಗೆ ಸಲಹೆಗಳು | 50 (ಮಾರ್ಗಸೂಚಿಯಂತೆ) |
| 3. | ಚಲನಚಿತ್ರ ಮೂಲಕ ಪ್ರದರ್ಶನ | ಅಗತ್ಯಕ್ಕೆ ತಕ್ಕಂತೆ ಸಂಬಂಧಪಟ್ಟ ವಾರ್ತಾ ಘಟಕಗಳ ಸಹಕಾರ ದೊಂದಿಗೆ |
| 4 | ವಸ್ತು ಪ್ರದರ್ಶನಗಳು | ದನಗಳ ಜಾತ್ರೆ ಮತ್ತು ಇತರೆ ವಿಶೇಷ ಸಂದರ್ಭದಲ್ಲಿ ಹೆಚ್ಚು ಖರ್ಚಿಲ್ಲದಂತೆ ಮಾರ್ಗಸೂಚಿಗನುಸಾರವಾಗಿ ಏರ್ಪಡಿಸುವುದು |
| 5 | ವಿಶಿಷ್ಟ ಲೇಖನ ಮತ್ತು ಯಶೋಗಾಥೆಗಳು | 6 |
| 6 | ಗೋಡೆ ಬರಹ | 10 |
| 7 | ಪತ್ರಿಕಾ ಪ್ರಕಟಣೆಗಳು | 10 |
| 8 | ಕ್ಷೇತ್ರೋತ್ಸವಗಳು | 10 |

## ಘಟಕವಾರು ವಿವರಗಳು ಃ

- **ವಿಸ್ತರಣಾ ಸಾಹಿತ್ಯಃ**

ವಿವಿಧ ರೀತಿಯ ವಿಸ್ತರಣಾ ಸಾಹಿತ್ಯಗಳಾದ ಹಸ್ತಪತ್ರಿಕೆ. ಮಡಿಸಿದ ಕರಪತ್ರ, ಬಿತ್ತಿ ಪತ್ರ, ಪುಸ್ತಕಗಳು ಇತ್ಯಾದಿಗಳನ್ನು ಹೊರತರುವಾಗ ಜಿಲ್ಲಾ/ತಾಲ್ಲೂಕುಗಳ ಕೃಷಿ ಹವಾಮಾನ ವಲಯಗಳಿಗೂ ಪ್ರಾಮುಖ್ಯತೆಯನ್ನು ನೀಡತಕ್ಕದ್ದು. ಕೇಂದ್ರ ಕಛೇರಿಯಿಂದ ಕಳುಹಿಸಿಕೊಡುವ ವಿಸ್ತರಣಾ ಸಾಹಿತ್ಯಗಳನ್ನು ಆಧ್ಯತೆಯ ಮೇಲೆ ಅಧೀನ ಕಛೇರಿಗಳಿಗೆ ಅದರಲ್ಲೂ ರೈತ ಸಂಪರ್ಕ ಕೇಂದ್ರಗಳಿಗೆ ತಪ್ಪದೇ ಕೂಡಲೇ ವಿತರಿಸಿ ಇವುಗಳ ಪೂರ್ಣ ಪ್ರಯೋಜನ ಪಡೆಯುವುದು.

- **ತ್ರೈ ಮಾಸಿಕ ಪತ್ರಿಕೆಃ**

ಕೃಷಿ ಇಲಾಖೆಯು ರಾಜ್ಯ ಮಟ್ಟದಲ್ಲಿ ರೈತಮಿತ್ರ ಎಂಬ ಹೆಸರಿನ ಕೃಷಿ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿದ್ದು ಈ ಪತ್ರಿಕೆಯಲ್ಲಿ ರಾಜ್ಯ/ಜಿಲ್ಲಾ/ತಾಲ್ಲೂಕು ಮಟ್ಟದ ಕಾರ್ಯಕ್ರಮಗಳು, ತರಬೇತಿ ಕಾರ್ಯಕ್ರಮಗಳು, ಚುನಾಯಿತ/ಗಣ್ಯ ವ್ಯಕ್ತಿಗಳ ಪ್ರವಾಸದ ಬಗ್ಗೆ, ರೈತರ ಯಶೋಗಾಥೆ ಮುಂತಾದವುಗಳನ್ನು ಸುದ್ದಿಯ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಸಂಬಂಧಪಟ್ಟ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಈ ಮಾಹಿತಿಯನ್ನು ತಪ್ಪದೇ ಕೃಷಿ ಆಯುಕ್ತಾಲಯಕ್ಕೆ ಕಳುಹಿಸಿಕೊಡಲು ಸೂಚಿಸಿದೆ.

- **ಪತ್ರಿಕಾ ಪ್ರಕಟಣೆಃ**

ಪತ್ರಿಕಾ ಪ್ರಕಟಣೆಯು ಸಮೂಹ ಮಾಧ್ಯಮದ ಒಂದು ಅಂಗವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಆಯಾ ಸ್ಥಳೀಯ ಪತ್ರಿಕಾ ಸಂಪಾದಕರೊಂದಿಗೆ ನಿಕಟ ಬಾಂದವ್ಯವನು ಹೊಂದಿ ಕೃಷಿ ವಿಷಯಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಿಯಾತ್ಮಕ ಕ್ರಮ ಕೈಗೊಳ್ಳುವುದು. ಈ ಅಂಕಣಕ್ಕೆ ಪೂರೈಸುವ ಮಾಹಿತಿ, ಲೇಖನಗಳು, ರೈತರ ಆಸಕ್ತಿ ಹಾಗೂ ಅಭಿಲಾಷೆಗೆ ತಕ್ಕಂತೆ ಸ್ಥಳೀಯ ಭಾಷೆ ಹಾಗೂ ದಾಟಿಯಲ್ಲಿರಬೇಕು.

- **ವ್ಯವಸ್ಥಿತ ಪತ್ರಿಕಾ ಪ್ರತಿನಿಧಿಗಳ / ರೈತರ ಪ್ರವಾಸಗಳುಃ**

ಸಂಬಂಧಪಟ್ಟ ಕೃಷಿ ಇಲಾಖಾ ಅಧಿಕಾರಿಗಳು ವಾರ್ತಾ ಇಲಾಖೆಯ ವಿಭಾಗೀಯ ಮತ್ತು ಜಿಲ್ಲಾ ಅಧಿಕಾರಿಗಳ ಸಹಕಾರದೊಂದಿಗೆ ಜಿಲ್ಲೆಗಳಲ್ಲಿ ವಿವಿಧ ಕಾರ್ಯಕ್ರಮಗಳನ್ವಯ ಸಾಧಿಸಿರುವ ಸಾಧನೆಗಳ ಉತ್ತಮ ಅಂಶಗಳನ್ನು ಬೆಳಕಿಗೆ ತರಲು ಪತ್ರಿಕಾ ಪ್ರತಿನಿಧಿಗಳ ಹಾಗೂ ರೈತರ ಪ್ರವಾಸವನ್ನು ಸೂಕ್ತ ಸಂದರ್ಭಗಳಲ್ಲಿ ಏರ್ಪಡಿಸತಕ್ಕದ್ದು.

- **ಚಲನ ಚಿತ್ರದ ಮೂಲಕ ಪ್ರದರ್ಶನ :**

ಈ ಪ್ರದರ್ಶನಗಳನ್ನು ಕಾರ್ಯಕ್ರಮಗಳ ಉಜ್ವಲಾಂಶಗಳನ್ನು ಪ್ರತಿಬಿಂಬಿಸುವಂತೆ ಹಂಗಾಮುವಾರು ಆಯಾ ಜಿಲ್ಲೆಗಳಲ್ಲಿ ಪ್ರದರ್ಶಿಸುವ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸತಕ್ಕದ್ದು.

- **ಸಾಕ್ಷ್ಯ ಚಿತ್ರಗಳ ತಯಾರಿಕೆಃ**

ಸಾಕ್ಷ್ಯ ಚಿತ್ರಗಳನ್ನು ಹೊಸ ತಂತ್ರಜ್ಞಾನ ಅಳವಡಿಕೆಯ ಬಗ್ಗೆ ರೈತರ ಅಭಿಪ್ರಾಯಗಳು ಮತ್ತು ಅನುಭವಗಳನ್ನು ಮಂಡನೆ ಮಾಡಲು ಬಳಸಿಕೊಳ್ಳಬಹುದಾಗಿದೆ. ಇಂತಹ ಸಾಕ್ಷ್ಯ ಚಿತ್ರಗಳನ್ನು ರೈತರ ಗುಂಪು ಸಭೆಗಳು ಮತ್ತು ಇತರೆ ಸಮಾರಂಭಗಳಲ್ಲಿ ಪ್ರಸಾರ ಮಾಡಬಹುದು.

- **ಛಾಯಾಚಿತ್ರಗಳುಃ**

ಉತ್ತಮ ಛಾಯಾ ಚಿತ್ರಗಳನ್ನು ಸಂಗ್ರಹಿಸಿ, ಅವುಗಳಿಗೆ ಸ್ಪಷ್ಟ ಸಂಖ್ಯೆಗಳನ್ನು ನೀಡಿ, ಆಲ್ಬಂನಲ್ಲಿ ಸಂಗ್ರಹಿಸಿಡಬೇಕು. ಈ ಛಾಯಾಚಿತ್ರಗಳನ್ನು ವಿವಿಧ ಪ್ರಕಟಣೆಗಳಿಗೆ ಬಳಸಿಕೊಳ್ಳಲು ಪ್ರಯೋಜನಕಾರಿಯಾಗುತ್ತದೆ. ವಿಸ್ತರಣಾ ಕಾರ್ಯಕ್ರಮಗಳಿಗೆ ಉಪಯೋಗಿಸಿಕೊಳ್ಳುವ ದೃಶ್ಯ ಸಾಧನಗಳನ್ನು ತಯಾರಿಸಲು ಕಲಾಕಾರರ ಕೌಶಲ್ಯವನ್ನು ಪೂರ್ಣವಾಗಿ ಬಳಸಿಕೊಳ್ಳಬಹುದಾಗಿದೆ.

- **ಗೋಡೆ ಬರಹಗಳುಃ**

ಗ್ರಾಮಗಳಲ್ಲಿ ರೈತ ಬಾಂಧವರು ಹೆಚ್ಚಾಗಿ ಸೇರಬಹುದಾದಂತಹ ಗ್ರಾಮ ಪಂಚಾಯಿತಿ ಕಛೇರಿ ಅಥವಾ ರೈತ ಸಂಪರ್ಕ ಕೇಂದ್ರಗಳು ಅಥವಾ ಕೃಷಿ ಸಹಾಯಕರ ವಾಸದ ಮನೆ ಅಥವಾ ಕಾಫಿ/ಚಹಾ, ಹೋಟೆಲ್, ಅಂಗಡಿ ಮುಂತಾದವುಗಳ ಗೋಡೆಯ ಒಂದು ಭಾಗವನ್ನು (ಎಲ್ಲರಿಗೂ ಕಾಣುವಂತಹ) ಕಪ್ಪು ಹಲಗೆಯಾಗಿ ಪರಿವರ್ತಿಸಿ, ಸದರಿ ಹಲಗೆಯ ಮೇಲೆ ರೈತರು ಕೈಗೊಳ್ಳಬೇಕಾದ ಬೇಸಾಯಕ್ರಮಗಳು, ಪ್ರಭಾವಿತ ಅಂಶಗಳು. ಕೀಟ ಹಾಗೂ ರೋಗ ಬಾಧೆಯ (ಆ ಪ್ರದೇಶದಲ್ಲಿ ಕಾಣಿಸಿದಾಗ) ನಿಯಂತ್ರಣದಲ್ಲಿ ಕೈಗೊಳ್ಳಬೇಕಾದ ಅಂಶಗಳನ್ನು ಗೋಡೆ ಬರಹಗಳ ಮೂಲಕ ಪ್ರದರ್ಶಿಸುವುದು.

- **ಸಿ.ಡಿ./ ಡಿ.ವಿ.ಡಿ./ವೀಡಿಯೋ ಕ್ಯಾಸೆಟ್ ತಯಾರಿಕೆ/ಪ್ರದರ್ಶನಃ**

ಆಯಾ ಪ್ರದೇಶಗಳಲ್ಲಿ ಪದೇ ಪದೇ ಕಂಡು ಬರುವಂತಹ ಅಥವಾ ಹೊಸದಾಗಿ ವ್ಯಾಪಕವಾಗಿ ಕಂಡು ಬರುವಂತಹ ಸಮಸ್ಯೆಗಳ ಬಗ್ಗೆ ಪರಿಹಾರ ಕ್ರಮಗಳ ಅಥವಾ ಇನ್ಯಾವುದೇ ನವೀನ ತಂತ್ರಜ್ಞಾನದ ಬಗ್ಗೆ ಸ್ಥಳೀಯವಾಗಿ ಲಭ್ಯವಿರುವ ಸವಲತ್ತುಗಳನ್ನು ಉಪಯೋಗಿಸಿಕೊಂಡು ಅಲ್ಪಕಾಲದ ಸಿ.ಡಿ./ ಡಿ.ವಿ.ಡಿ./ವೀಡಿಯೋ ಕ್ಯಾಸೆಟುಗಳನ್ನು ತಯಾರಿಸಿ ಹೆಚ್ಚಿನ ಪ್ರಚಾರ ನೀಡಲು ಕ್ರಮ ಕೈಗೊಳ್ಳತಕ್ಕದ್ದು.

- **ರೈತರಿಗೆ ಸಲಹೆಃ**

ರೈತರಿಗೆ ಸಲಹೆ ಮಾಹಿತಿಯನ್ನು ಬೆಂಗಳೂರು ಆಕಾಶವಾಣಿ ನಿಲಯಕ್ಕೆ ಒಳಪಡುವ ಜಿಲ್ಲೆಗಳವರು ಕೇಂದ್ರ ಕಛೇರಿಗೂ ಹಾಗು ಉಳಿಕೆ ಜಿಲ್ಲೆಯವರು ತಮಗೆ ಸಂಬಂಧಪಟ್ಟ ಸ್ಥಳೀಯ ಆಕಾಶವಾಣಿ ಕೇಂದ್ರಗಳಿಗೆ ನಿಗದಿಪಡಿಸಿರುವಂತೆ ಮತ್ತು ಇಲಾಖೆಗೆ ಈ-ಮೇಲ್ ಮುಖಾಂತರ ತಪ್ಪದೇ ಕಳುಹಿಸಿಕೊಡುವುದು.

- **ಕೃಷಿ ವಿಸ್ತರಣೆಗೆ ಸಮೂಹ ಮಾಧ್ಯಮ ಬೆಂಬಲ ಒದಗಿಸಲು ಜಿಲ್ಲಾ ಮಟ್ಟದ ಸಮಿತಿಗಳ ರಚನೆ.**

ಕೃಷಿ ವಿಸ್ತರಣೆಗೆ ಸಮೂಹ ಮಾಧ್ಯಮ ಬೆಂಬಲ ಒದಗಿಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆಃ ಎಎಚ್ ಡಿ.27.ಎಎಂಎಸ್.2004 ದಿಃ 10-06-2005ರ ಮೂಲಕ ರಾಜ್ಯದ 11 ಜಿಲ್ಲೆಗಳಲ್ಲಿ ಅಂದರೆ ಬೆಂಗಳೂರು, ಮಂಗಳೂರು, ಮೈಸೂರು, ಬಿಜಾಪುರ, ಹಾಸನ, ಹೊಸಪೇಟೆ(ಬಳ್ಳಾರಿ), ಚಿತ್ರದುರ್ಗ, ರಾಯಚೂರು, ಕಾರವಾರ, ಶಿವಮೊಗ್ಗ ಮತ್ತು ಮಡಿಕೇರಿ ಕೇಂದ್ರಗಳಲ್ಲಿ ಆಕಾಶವಾಣಿ ಎಫ್.ಎಂ. ಕಿಸಾನ್ ವಾಣಿ ಕೇಂದ್ರಗಳು ಮತ್ತು ಗುಲ್ಬರ್ಗಾ ಹಾಗೂ ಬಳ್ಳಾರಿಯಲ್ಲಿ ದೂರದರ್ಶನ ನ್ಯಾರೋ ಕಾಸ್ಟಿಂಗ್ ಕೇಂದ್ರಗಳು ಸ್ಥಾಪನೆಯಾಗಿರುವ ಕಾರಣ ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಿ (ಇನ್ನೂ ರಚಿಸದಿದ್ದಲ್ಲಿ ಸದಸ್ಯರ ಪಟ್ಟಿ ಲಗತ್ತಿಸಿದೆ) ಪ್ರತಿ ತಿಂಗಳು ಸಭೆ ಸೇರಿ ದೂರದರ್ಶನ ಮತ್ತು ಆಕಾಶವಾಣಿ ಕೇಂದ್ರಗಳ ಮೂಲಕ ಪ್ರಸಾರವಾದ ಹಾಗೂ ಮುಂದೆ ಪ್ರಸಾರವಾಗಬೇಕಾದ ಕಾರ್ಯಕ್ರಮಗಳ ವಿಮರ್ಶೆ ಕೈಗೊಳ್ಳುವುದು. ನಂತರ ನಿಗದಿತ ನಮೂನೆಯಲ್ಲಿ ತ್ರೈಮಾಸಿಕ ಪ್ರಗತಿ ವರದಿಯನ್ನು ಕೃಷಿ ವಾರ್ತಾ ವಿಭಾಗಕ್ಕೆ ತಪ್ಪದೇ ಕಳುಹಿಸಿಕೊಡುವುದು(ನಿಗದಿತ ನಮೂನೆಯನ್ನು ಲಗತ್ತಿಸಿದೆ).

ಆಕಾಶವಾಣಿ ಎಫ್.ಎಂ.ಕಿಸಾನ್ ವಾಣಿ ಕೇಂದ್ರಗಳನ್ನು ಮತ್ತು ದೂರದರ್ಶನ ಕೇಂದ್ರದ ನ್ಯಾರೋ ಕಾಸ್ಟಿಂಗ್ ಕೇಂದ್ರಗಳನ್ನು ಸಂಬಂಧಪಟ್ಟ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರವರು ಕೃಷಿ ತಂತ್ರಜ್ಞಾನ ವರ್ಗಾವಣೆಗೆ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವುದು. ಹಾಗೂ ಸಂಬಂಧಪಟ್ಟ ಕೇಂದ್ರಗಳ ಮುಖ್ಯಸ್ಥರುಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿರುವುದು.

- **ಫೋನ್ ಇನ್ ಕಾರ್ಯಕ್ರಮ ಃ**

ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳ ಮೂಲಕ ನೇರ ಫೋನ್-ಇನ್ ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ನಿಗದಿತ ದಿನಾಂಕಗಳಂದು ರಾಜ್ಯ ಮಟ್ಟದಲ್ಲಿ ಏರ್ಪಡಿಸಲಾಗುವುದು. ಈ ಬಗ್ಗೆ ರೈತ ಬಾಂಧವರಲ್ಲಿ ಹೆಚ್ಚಿನ ಪ್ರಚಾರ ನೀಡುವ ಕ್ರಮ ವಹಿಸುವುದು. ಅವಶ್ಯಕತೆಗೆ ತಕ್ಕಂತೆ ಜಿಲ್ಲಾ ಕೇಂದ್ರಗಳಿಂದಲೂ ಸಹ ನೇರ ಫೋನ್ ಇನ್ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

- **ಆರ್ಥಿಕ ಅನುದಾನ:**

ವಿಸ್ತರಣಾ ಸಾಹಿತ್ಯಗಳ ಮುದ್ರಣ ಮತ್ತು ಕಲಾ, ಛಾಯಾಚಿತ್ರ, ಮುದ್ರಣಾಲಯಕ್ಕೆ ಸಂಬಂಧಪಟ್ಟ ವಸ್ತುಗಳ ತಯಾರಿಕೆ/ಖರೀದಿಸುವಿಕೆ ಮುಂತಾದ ಖರ್ಚುಗಳನ್ನು ಭರಿಸಲು ಕೃಷಿ ವಾರ್ತಾ ಘಟಕದಡಿಯಲ್ಲಿ 2009-10ನೇ ಸಾಲಿನಲ್ಲಿ ಒಟ್ಟು ರೂ.50.00 ಲಕ್ಷಗಳ ಕಾರ್ಯಕ್ರಮ ಇದ್ದು ಈ ಮೊತ್ತದಲ್ಲಿ ಪ್ರತಿ ಜಿಲ್ಲೆಗೆ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ರೀತಿ ಪ್ರತಿ ಜಿಲ್ಲೆಗೆ ಒದಗಿಸಲಾಗಿರುವ ಅನುದಾನವನನ್ನು ಆಯಾ ಜಿಲ್ಲೆಯ ಕೃಷಿ ವಾರ್ತಾ ಚಟುವಟಿಕೆಗಳಿಗಾಗಿ ಮಾರ್ಗಸೂಚಿ ಅನುಸರಿಸಿ ಮಾಹೆಯಾನ ಗುರಿಯನ್ವಯ ಕಾಲಕಾಲಕ್ಕೆ ಪ್ರಗತಿ ಸಾಧಿಸುವುದು.

| |
|---|
| **ವಿಶೇಷ ಸೂಚನೆ:** ಈ ಲೆಕ್ಕ ಶೀರ್ಷಿಕೆಯಡಿ ಜಿಲ್ಲಾ ಮಟ್ಟಕ್ಕೆ ಬಿಡುಗಡೆಯಾದ ಅನುದಾನವನ್ನು ಯಾವುದೇ ಕಾರಣಕ್ಕೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಿಗೆ ಬಿಡುಗಡೆ ಮಾಡಬಾರದು. ಜಿಲ್ಲೆಯ ಒಟ್ಟಾರೆ ವೆಚ್ಚವನ್ನೆಲ್ಲಾ ಜಂಟಿ ಕೃಷಿ ನಿರ್ದೇಶಕರೇ ಭರಿಸತಕ್ಕದ್ದು. |

## 2009-10ನೇ ಸಾಲಿನ ಕೃಷಿ ವಾರ್ತಾ ಘಟಕ - ಲೆಕ್ಕಶೀರ್ಷಿಕೆ 2401-00-109-0-21

## (ಉಪ ಶೀರ್ಷಿಕೆಃ 059 ಇತರೆ ವೆಚ್ಚಗಳು.) ಅಡಿಯಲ್ಲಿ ಜಿಲ್ಲಾವಾರು ಅನುದಾನ ಹಂಚಿಕೆಯ ವಿವರ

| ಕ್ರ.ಸಂ. | ಜಿಲ್ಲೆ | ಅನುದಾನ ಲಕ್ಷ. ರೂ.ಗಳಲ್ಲಿ |
|---|---|---|
| 1 | ಬೆಂಗಳೂರು(ನ) | 1.00 |
| 2 | ಬೆಂಗಳೂರು(ಗ್ರಾ) | 1.00 |
| 3 | ರಾಮನಗರ | 1.00 |
| 4 | ಕೋಲಾರ | 1.00 |
| 5 | ಚಿಕ್ಕಬಳ್ಳಾಪುರ | 1.00 |
| 6 | ತುಮಕೂರು | 1.00 |
| 7 | ಶಿವಮೊಗ್ಗ | 1.00 |
| 8 | ಚಿತ್ರದುರ್ಗ | 1.00 |
| 9 | ದಾವಣಗೆರೆ | 1.00 |
| 10 | ಮೈಸೂರು | 1.00 |
| 11 | ಚಾಮರಾಜನಗರ | 1.00 |
| 12 | ಮಂಡ್ಯ | 1.00 |
| 13 | ಕೊಡಗು | 1.00 |
| 14 | ಹಾಸನ | 1.00 |
| 15 | ಚಿಕ್ಕಮಗಳೂರು | 1.00 |
| 16 | ದ.ಕನಡ | 1.00 |
| 17 | ಉಡುಪಿ | 1.00 |
| 18 | ಧಾರವಾಡ | 1.00 |
| 19 | ಗದಗ | 1.00 |
| 20 | ಹಾವೇರಿ | 1.00 |
| 21 | ಉತ್ತರ ಕನಡ | 1.00 |
| 22 | ಬೆಳಗಾವಿ | 1.00 |
| 23 | ಬಿಜಾಪುರ | 1.00 |
| 24 | ಬಾಗಲಕೋಟೆ | 1.00 |
| 25 | ರಾಯಚೂರು | 1.00 |
| 26 | ಕೊಪ್ಪಳ | 1.00 |
| 27 | ಬಳ್ಳಾರಿ | 1.00 |
| 28 | ಗುಲ್ಬರ್ಗಾ | 1.00 |
| 29 | ಬೀದರ್ | 1.00 |
| | **ಕೇಂದ್ರ ಕಛೇರಿ** | **21.00** |
| | **ಒಟ್ಟು** | **50.00** |

**PROCEEDINGS OF THE GOVERNMENT OF KARNATAKA**

**Sub: Constitution of District Level Agriculture Mass Media Committees -reg**

**Read: 1. Government Order No.AHD.207.AMS.2000 Dated: 10-01-2001.**
**2. D.O.Lt.No.21(7)/2003-F1(1) dated: 09-09-2004 of the Joint Secretary, Government of India, New Delhi.**

**Preamble:**

In the Government Order Read at (1) above sanction was accorded for constitution of State Level Media Co-ordination Committee under the Chairmanship of Additional Chief Secretary and Development Commissioner in order to provide greater media support to agriculture in the state.

Now, the Joint Secretary, Government of India, Ministry of Agriculture, Department of Agriculture and Co-operation, New Delhi in his D.O.Lt. Read at (2) above addressed to the Principal Secretary of this Department among other things has requested him to constitute State and District Level Agriculture Mass Media Committees for monitoring the implementation of scheme of Mass Media support for agriculture extension in the state.

Since the State Government has already constituted State Level Co-ordination Committee to oversee the Media Support to Agricultureand therefore it has been decided to constitute District Level Agriculture Mass Media Committees in those districts of the State where Doordarshan Narrow Casting and AIR FM Station have already started its operations under the Scheme-Mass Media Support to Agriculture Extension. The districts are Bangalore, Mysore,Gulbarga, Mangalore, Bijapur Hassan, Hospet, Chitradurga, Raichur, North Karnataka(Karwar) & Kodagu.

**Hence this order**

**Government Order No.AHD.27.AMS.2004, Bangalore, Dated: 10-06-2005**

Sanction is hereby accorded for the Constitution of the District Level Agriculture Mass Media Committee in eleven districts of the State viz, Bangalore,Mysore,Gulbarga, Mangalore, Bijapur, Hassan, Hospet(Bellary), Chitradurga, Raichur, North Karnataka(Karwar) under the Chairmanship of the Chief Executive Officer, Zilla Panchayats of those district to over see the implantation of Mass Media Support to Agriculture Extension in the district.

The other members and functions of those committees are indicated in the ANNEXURE appended to this order.

By Order & in the Name of
Governor of Karnataka
Sd/-
(V. Kumar)
Under Secretary to Government
Agriculture & Horticulture Department

To:

1. Accountant General(A &E) & (Audit) Bangalore
2. Commissioner/Director of Agriculture,Bangalore
3. All the Chief Executive Officers, Zilla Panchayats in the State.
4. The concerned District Officers of Indormation, Animal Husbandry, Forest, Fisheries, Horticulture, Sericulture(through Department of Agricultgure).
5. Training Co-ordinator, K.V.Ks in the district(through Director of Extension, AS, Bangalore/Dharwar)
6. Officer-in-charge of Doordharshan/AIR of the above districts.
7. Concerned Joint Director of Agriculture of the District.
8. Director of Extension, UAS, Bangalore/Dharwar.
9. Joint Secretary(Extension) Government of India, Ministry of Agriculture, Department of Agriculture & Co-operation, Krishi Bhavan, New Delhi.
10. SGF/Spare Copies.

**ANNEXURE**
**Constitution of District Level Agricultural Mass Media Committees**
**Government Order No. ADH.27.AMS.2004,Bangalore dtd: 9-6-2004**

| | | |
|---|---|---|
| 1 | Chief Executive Officer, Zilla Panchayat of the District | Chairman |
| 2 | Chairman, Agriculture Standing Committee, Z.P. of the concerned district | Member |
| 3 | District Officer of Information Department of the District | Member |
| 4 | District Officer of Forest Department/Social Factory) of the District | Member |
| 5 | Distct Officer of Forest Department/(Social Forestry) of the District | Member |
| 6 | Training Coordinator, KVK(UAS) attached to the District | Member |
| 7 | Station Incharge Officer of DD/AIR of the District | Member |
| 8 | Programme Head/Engineering Head of DD/AIR of the District | Member |
| 9 | One farmer representative(to be nominated by the Chairman) | Member |
| 10 | One Women Farmer( to be nominated by the Chairman) | Member |
| 11 | One representative of the input industry(to be nominated to the Chairman) | Member |
| 12 | District Joint Director | Member Secretary |

**Functions of the Committee**

1. The committee would formulae a monthly guideline for production of content which is of relevant to the area under the range of the transmitter.

2. The committee would review theprogrammes that have been broadcast over the last one month and suggest changes that may be necessary.

3. In case of a crisis situation or a situation that the chairman feels needs a daily Medical Intervention, the committee will make suggestions at such intervals as may be necessary to address the crisis.

4. The committee will send quarterly reports to the State Level Committee/Central Apex Committee indicating the activities undertaken during the last month, the suggestion made and the action taken on the same.

Sd/-
**(V. Kumar)**
Under Secretary to Government
Agriculture & Horticulture Department

## Annexure -II

**REPORT OF DISTRICT LEVEL COMMITTEE (DLC) FROM--------------(NAME OF DISTRICT) FOR THE QUARTER-----------------------------------**

1) District where DLC is located
2) Date of Constitution of (DLC)
3) Dates of meetings of DLC held in past 12 months.

| Sl. No | Date of Meeting | Minutes sent to the SLC Yes/No |
|---|---|---|
| 1 | | |
| 2 | | |
| 3 | | |
| 4 | | |

4) Status of Quarterly Reports

| Sl. No | Quarter | Sent to SLC Yes/No/Not due |
|---|---|---|
| 1 | January-March 2010 | |
| 2 | April - June 2009 | |
| 3 | July-September 2009 | |
| 4 | October - December 2009 | |

5) What is the arrangement in the District to provide technical information to DD/AIR for the production of programmes.
6) What is the arrangement in the District to provide information to DD/AIR to cover any urgent situation relating to farming operations?
7) Guidance given to DD during the last three months along with action taken by DD on such guidance.
8) Guidance given to AIR during the last three months along with action taken by AIR on such guidance.
9) Action taken by the DLC on the suggestions/guidance given by SLC.
10) Status of fortnightly Feedback Report from Audience Research Unit(ARU) of All India Radio.

| Sl. No | Period of ARU Feedback reports | Action Taken by DLC on the ARU Feedback Report |
|---|---|---|
| | | |
| | | |
| | | |
| | | |

12) Status of Weekly Feedback report from Audience Research Unit(ARU) of Doordarshan and action taken on the same?

| Sl. No | Name of Narrow casting Kendra | Reports received from ARU of Doordarshan during the quarter under report | | Action taken by DLC |
|---|---|---|---|---|
| | | Total number of reports | Period covered under different report | |
| 1 | | | | |
| 2 | | | | |
| 3 | | | | |
| 4 | | | | |
| 5 | | | | |

13) a. Feedback received from Departmental Officers and Scientists and action taken by DLC on the same.

b. Any salient feedback received by DLC from other sources.

14) Action taken by DLC/DD/AIR to provide information on

i. Govt. Schemes
ii. Success stories
iii. Service Oriented Programmes
iv. Phone-in-Programme
v. Linkage with KCC
vi. Crop Seminar

15) Information on other innovative programmes or initiatives taken by DLC/DD/AIR in the District, which could be usefully shared with other Districts.

16) Any other suggestions to improve quality and content of programmes.

Joint Director of Agriculture

## 2. ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನಗಳು - ರಾಜ್ಯ ಮತ್ತು ಜಿಲ್ಲಾ ವಲಯ (ಲೆಕ್ಕ ಶೀರ್ಷಿಕೆ 2401-00-109-0-21 ಉಪ ಶೀರ್ಷಿಕೆ - 051 - ಸಾಮಾನ್ಯ ವೆಚ್ಚಗಳು(ರಾಜ್ಯ ವಲಯ) ( ಲೆಕ್ಕ ಶೀರ್ಷಿಕೆ 2401-00-109-0-71 (ಜಿಲ್ಲಾ ವಲಯ)

**ಉದ್ದೇಶಃ** ರಾಜ್ಯದ ರೈತ ಬಾಂಧವರಿಗೆ ಆಧುನಿಕ ಕೃಷಿ ತಾಂತ್ರಿಕತೆಯನ್ನು ಪರಿಚಯಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶ.

ಕೃಷಿ ವಸ್ತು ಪ್ರದರ್ಶನಗಳು ರೈತ ಸಮುದಾಯಕ್ಕೆ ಆಧುನಿಕ ಕೃಷಿ ತಾಂತ್ರಿಕತೆಗಳನ್ನು ಪರಿಣಾಮಕಾರಿಯಾಗಿ ವರ್ಗಾಯಿಸಲು ಅನುಕೂಲವಾಗುವುದರಿಂದ, ಆಯಾ ಮಟ್ಟದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಜರುಗುವ ಜಾತ್ರೆ, ಪ್ರದರ್ಶನ ಇತ್ಯಾದಿಗಳಲ್ಲಿ ವಸ್ತು ಪ್ರದರ್ಶನ ಏರ್ಪಡಿಸಬೇಕು. ವಸ್ತು ಪ್ರದರ್ಶನಗಳು ಅರೆಪಟ್ಟಣ, ಗ್ರಾಮಾಂತರ ಪ್ರದೇಶಗಳ ಮಟ್ಟದಲ್ಲಿ ಏರ್ಪಡಿಸಬೇಕು. ಸಂದರ್ಭಕ್ಕನುಸಾರವಾಗಿ ಪಟ್ಟಣಗಳಲ್ಲಿಯೂ ಸಹ ಏರ್ಪಡಿಸಬಹುದಾಗಿದೆ. ಸಾಧ್ಯವಾದ ಕಡೆ ಬೆಳೆ ಅಂಗಳಗಳನ್ನು ಸಹ ಮಾಡತಕ್ಕದ್ದು. ಲಭ್ಯವಿರುವ ಹಣದ ಪರಿಮಿತಿಯೊಳಗೆ ಸ್ವಾತಂತ್ರೋತ್ಸವ/ಗಣರಾಜ್ಯೋತ್ಸವದ ಸಮಯದಲ್ಲಿ ಸ್ತಬ್ಧ ಚಿತ್ರಗಳನ್ನು ಅಗತ್ಯಾನುಸಾರ ಏರ್ಪಡಿಸಬೇಕು. ಜಿಲ್ಲೆಗೆ ನೀಡಿರುವ ಅನುದಾನದಲ್ಲಿ ವಸ್ತು ಪ್ರದರ್ಶನಗಳ ಉತ್ತಮ ಪ್ರದರ್ಶಿಕೆಗಳನ್ನು ಹಾಗು ಪ್ರದರ್ಶನ ವೇಳೆಯಲ್ಲಿ ಹಸ್ತ ಪ್ರತಿಗಳನ್ನು ಹಂಚಲು ಪೂರ್ವಸಿದ್ಧತೆಗಳೊಂದಿಗೆ ತಯಾರಿಸಿಕೊಳ್ಳಬೇಕು.

ಪ್ರಸಕ್ತ ಸಾಲಿನಲ್ಲಿ ಜಿಲ್ಲಾ / ತಾಲ್ಲೂಕು ಮಟ್ಟದಲ್ಲಿ ಕೃಷಿ ಯಂತ್ರೋಪಕರಣಗಳ ಬಗ್ಗೆ ರೈತ ಸಮುದಾಯಕ್ಕೆ ಅರಿವು ಮೂಡಿಸಲು ವಸ್ತು ಪ್ರದರ್ಶನಗಳನ್ನು ಏರ್ಪಡಿಸಲು ಅವಕಾಶ ಕಲ್ಪಿಸಿದ್ದು, ಧಾರವಾಡ ಮತ್ತು ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ನಡೆಯುವ ಕೃಷಿ ಮೇಳಗಳಲ್ಲಿ ಈ ಕುರಿತು ವಿಶೇಷ ಅವಕಾಶ ಕಲ್ಪಿಸಲಾಗಿದೆ. ಸಂಬಂಧಪಟ್ಟ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಈ ಕುರಿತು ವಿಶ್ವ ವಿದ್ಯಾಲಯಗಳ ವಿಸ್ತರಣಾ ನಿರ್ದೇಶಕರುಗಳೊಂದಿಗೆ ಸಂಪರ್ಕಿಸಿ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ವಸ್ತು ಪ್ರದರ್ಶನಗಳಿಗಾಗಿ ಒದಗಿಸಲಾದ ಅನುದಾನದಲ್ಲಿ ಸ್ಟಾಲ್ ರೆಂಟ್, ಉತ್ತಮ ಪ್ರದರ್ಶಿಕೆಗಳ ತಯಾರಿಕೆ, ಸ್ಥಬ್ದ ಚಿತ್ರಗಳು, ಪ್ರದರ್ಶಿಕೆ ವಸ್ತುಗಳ ಸಾಗಾಣಿಕೆ ಹಾಗು ಮಳಿಗೆಗೆ ಸಂಭವಿಸುವ ಇತರೆ ವೆಚ್ಚಗಳಿಗೆ ನಿಯಮಾನುಸಾರ ಜಿಲ್ಲೆಗೆ ನೀಡಿರುವ ಅನುದಾನವನ್ನು ವಿನಿಯೋಗಿಸಬಹುದಾಗಿದೆ. ರಾಜ್ಯ ಮತ್ತು ಜಿಲ್ಲಾ ವಲಯಗಳ ಎರಡೂ ಕಾರ್ಯಕ್ರಮಗಳಡಿ ಬಿಡುಗಡೆಯಾಗುವ ಅನುದಾನವನ್ನು ಹೊಂದಿಸಿಕೊಂಡು ಜಿಲ್ಲೆ/ತಾಲ್ಲೂಕು/ಹೋಬಳಿ ಮಟ್ಟಗಳಲ್ಲಿ ನಡೆಯುವ ಜಾತ್ರೆ, ಉತ್ಸವ, ಸಂತೆ ಮತ್ತಿತರ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಲು ಅನುದಾನ ಬಳಸಲು ಹಾಗೂ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಪ್ರಚಾರಕ್ಕಾಗಿ ಕ್ರಮ ಕೈಗೊಳ್ಳಲು ಸೂಚಿಸಿದೆ.

ರಾಜ್ಯ ವಲಯದಲ್ಲಿ ಕೃಷಿ ಸಂಬಂಧಿತ ಬೇಸಾಯ ಚಟುವಟಿಕೆಗಳ ಲೆಕ್ಕ ಶೀರ್ಷಿಕೆ 2401-00-109-0-21 ಉಪ ಶೀರ್ಷಿಕೆ - 051 ಅಡಿ 2009-10ನೇ ಸಾಲಿನಲ್ಲಿ ರೂ.15.00 ಲಕ್ಷಗಳನ್ನು ಒದಗಿಸಲಾಗಿದೆ ಹಾಗೂ ಜಿಲ್ಲಾ ವಲಯದಲ್ಲಿ 2401-00-109-0-71 ಅಡಿಯಲ್ಲಿ ರೂ.18.64 ಲಕ್ಷಗಳು. "ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನಗಳ" ಕಾರ್ಯಕ್ರಮಕ್ಕೆ ಜಿಲ್ಲಾವಾರು ಮತ್ತು ರಾಜ್ಯ ವಲಯ ಅನುದಾನದ ಹಂಚಿಕೆಯ ವಿವರಗಳು ಇಂತಿವೆ.

## ಸಾಲಿನ ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನಗಳು

### ರಾಜ್ಯ ವಲಯ (2401-00-109-0-21) ಉ.ಶೀ. -051 ಮತ್ತು
### ಜಿಲ್ಲಾ ವಲಯ (2401-00-109-0-71) ಜಿಲ್ಲಾವಾರು ಅನುದಾನ ಹಂಚಿಕೆ ವಿವರ

(ಲಕ್ಷ. ರೂ.ಗಳಲ್ಲಿ)

| ಕ್ರ.ಸಂ | ಜಿಲ್ಲೆ | ಅನುದಾನ | | ಷರಾ |
|---|---|---|---|---|
| | | ಜಿಲ್ಲಾ ವಲಯ | ರಾಜ್ಯ ವಲಯ | |
| 1 | ಬೆಂಗಳೂರು(ನ) | 0.70 | 1.00 | ಕೃಷಿ ಮೇಳ ಮತ್ತು ಕೃಷಿ ಯಂತ್ರೋಪಕರಣಗಳ .ಪ್ರದರ್ಶನಗಳ ಬಾಬ್ತು ಸೇರಿದೆ |
| 2 | ಬೆಂಗಳೂರು (ಗ್ರಾ) | 0.25 | 0.75 | ಕೃಷಿ ಮೇಳ, ರಾಜ್ಯೋತ್ಸವಕ್ಕೆ ಸ್ತಬ್ಧ ಚಿತ್ರ ಪ್ರದರ್ಶನಗಳ ಬಾಬ್ತು ಸೇರಿದೆ |
| 3 | ರಾಮನಗರ | 0.25 | 0.25 | |
| 4 | ಕೋಲಾರ | 0.00 | 0.13 | |
| 5 | ಚಿಕ್ಕಬಳ್ಳಾಪುರ | 0.00 | 0.12 | |
| 6 | ತುಮಕೂರು | 4.00 | 1.00 | ಸಿದ್ದಗಂಗಾ ಜಾತ್ರೆ ಮತ್ತು ಇತರೆ ಬಾಬ್ತು |
| 7 | ಶಿವಮೊಗ್ಗ | 0.00 | 0.50 | |
| 8 | ಚಿತ್ರದುರ್ಗ | 1.50 | 0.25 | |
| 9 | ದಾವಣಗೆರೆ | 0.65 | 0.25 | |
| 10 | ಮೈಸೂರು | 1.42 | 3.50 | ದಸರಾ, ಸುತ್ತೂರು ಜಾತ್ರೆ ಮತ್ತು ಇತರೆ |
| 11 | ಚಾಮರಾಜನಗರ | 0.60 | 0.20 | |
| 12 | ಮಂಡ್ಯ | 2.00 | 0.25 | |
| 13 | ಕೊಡಗು | 0.50 | 0.25 | |
| 14 | ಹಾಸನ | 2.00 | 0.25 | |
| 15 | ಚಿಕ್ಕಮಗಳೂರು | 1.00 | 0.25 | |
| 16 | ದ.ಕನಡ | 0.50 | 0.50 | ಲಕ್ಷದೀಪೋತ್ಸವ ಹಾಗೂ ಇತರೆ ಬಾಬ್ತಿಗಾಗಿ |
| 17 | ಉಡುಪಿ | 0.51 | 0.25 | |
| 18 | ಧಾರವಾಡ | 0.00 | 1.25 | ಕೃಷಿ ಮೇಳ ಮತ್ತು ಕೃಷಿ ಯಂತ್ರೋಪಕರಣಗಳ ಪ್ರದರ್ಶನಗಳ ಬಾಬ್ತು ಸೇರಿದೆ |
| 19 | ಗದಗ | 0.21 | 0.20 | |
| 20 | ಹಾವೇರಿ | 0.51 | 0.25 | |
| 21 | ಉತ್ತರ ಕನ್ನಡ | 0.43 | 0.25 | |
| 22 | ಬೆಳಗಾವಿ | 0.20 | 0.25 | |
| 23 | ಬಿಜಾಪುರ | 0.50 | 0.25 | |
| 24 | ಬಾಗಲಕೋಟೆ | 0.61 | 0.25 | |
| 25 | ರಾಯಚೂರು | 0.00 | 0.20 | |
| 26 | ಕೊಪ್ಪಳ | 0.20 | 0.25 | |
| 27 | ಬಳ್ಳಾರಿ | 0.00 | 0.25 | |
| 28 | ಗುಲ್ಬರ್ಗಾ | 0.00 | 0.20 | |
| 29 | ಬೀದರ್ | 0.10 | 0.20 | |
| | ಕೇಂದ್ರ ಕಛೇರಿ | 0.00 | 1.50 | |
| | **ಒಟ್ಟು** | **18.64** | **15.00** | |

## 3. ರೈತರಿಗೆ ಉತ್ಪಾದನಾ ಬಹುಮಾನ - ಕೃಷಿ ಪ್ರಶಸ್ತಿ ಲೆ.ಶೀ - 2401-00-800-1-40

## ಉಪ ಲೆಕ್ಕ ಶೀರ್ಷಿಕೆ -117 ಶಿಷ್ಯ ವೇತನ ಹಾಗೂ ಪ್ರೋತ್ಸಾಹ

**ಪೀಠಿಕೆ :** ಕಳೆದ ಮೂರು ದಶಕಗಳಿಂದ ರಾಜ್ಯದ ಕೃಷಿ ಉತ್ಪಾದನೆ ಗಣನೀಯ ಹೆಚ್ಚಳವಾಗಲು ರೈತರ ಶ್ರಮ ಮತ್ತು ಸಕ್ರಿಯ ಪಾಲುಗಾರಿಕೆ ಕಾರಣವಾಗಿರುತ್ತದೆ. ಇಂತಹ ರೈತರನ್ನು ಗುರುತಿಸಲು ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಕೃಷಿ ಪ್ರಶಸ್ತಿ ಬಹುಮಾನಗಳನ್ನು ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ವಿವಿಧ ಹಂತಗಳಲ್ಲಿ ಆಯ್ಕೆ ಮಾಡಲಾದ ಬೆಳೆಗಳಲ್ಲಿ ಬೆಳೆಸ್ಪರ್ಧೆ ನಡೆಸಿ ಪ್ರತಿ ಬೆಳೆಗೂ ಮೂರು ಬಹುಮಾನಗಳನ್ನು ನೀಡಲಾಗುತ್ತಿದೆ.

ಉದ್ದೇಶಃ ಕೃಷಿ ವಲಯದ ಉತ್ಪಾದಕತೆ ಹೆಚ್ಚಿಸಲು ಹಾಗೂ ರೈತರಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದೇ ಈ ಯೋಜನೆಯ ಮೂಲೋದ್ದೇಶವಾಗಿದ್ದು ಈ ಯೋಜನೆಯನ್ನು ರಾಜ್ಯದಲ್ಲಿ 1992-93 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

1. ಸದರಿ ಕಾರ್ಯಕ್ರಮ ಕುರಿತಂತೆ ವಿವಿಧ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡುವುದು.
2. ಸ್ಪರ್ಧಾರ್ಥಿಗಳಿಂದ ವಿವಿಧ ಮಟ್ಟದ ಬೆಳೆ ಸ್ಪರ್ಧೆಗಳಿಗೆ ನಿಗದಿತ ಪ್ರವೇಶ ಶುಲ್ಕವನು ಸಕ್ಷಮ ಅರ್ಜಿ ಮತ್ತು ಭೂಮಾಲಿಕತ್ವ ಕ್ಷೇತ್ರ ಕುರಿತ ಕಂದಾಯ ಇಲಾಖೆಯ ದಾಖಲೆಗಳೊಂದಿಗೆ (ಪಹಣಿ ಪತ್ರಿಕೆ) ನಿಗದಿತ ದಿನಾಂಕದೊಳಗಾಗಿ ಪಡೆದ ಬಗ್ಗೆ ಸಂಬಂಧಪಟ್ಟ ವಹಿಗಳಲ್ಲಿ ನಮೂದಿಸತಕ್ಕದ್ದು. 2009ನೇ ಮುಂಗಾರು ಹಂಗಾಮಿಗೆ ಆಗಸ್ಟ್ 31 ಮತ್ತು ಹಿಂಗಾರು 2009-10ನೇ ಹಂಗಾಮಿಗೆ ನವಂಬರ್ 30 ರೊಳಗೆ ನೋಂದಾವಣಿ ಕಾರ್ಯಪೂರ್ಣಗೊಳಿಸತಕ್ಕದ್ದು. ವಿವಿದ ಹಂತದ ಬೆಳೆ ಸ್ಪರ್ಧೆಗೆ ಭಾಗವಹಿಸುವ ಸಾಮಾನ್ಯ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ರೈತರುಗಳು ಈ ಕೆಳಕಂಡಂತೆ ನಿಗದಿತ ಪ್ರವೇಶ ಶುಲ್ಕವನು ಸಂದಾಯ ಮಾಡತಕ್ಕದ್ದು.

| ಕ್ರ.ಸಂ | ಹಂತ | ಸಾಮಾನ್ಯ ರೈತರು(ರೂ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ರೈತರು (ರೂ) |
|---|---|---|---|
| 1 | ತಾಲ್ಲೂಕುಮಟ್ಟ | 100.00 | 25.00 |
| 2 | ಜಿಲ್ಲಾಮಟ್ಟ | 150.00 | 40.00 |
| 3 | ರಾಜ್ಯಮಟ್ಟ | 300.00 | 75.00 |

3. ವಿವಿಧ ಹಂತಗಳ ಸ್ಪರ್ಧೆಗೆ ನಿಗದಿಪಡಿಸಿದ ಬೆಳೆಗಳಲ್ಲಿ ಮಾತ್ರ ಸ್ಪರ್ಧೆಯನು ಏರ್ಪಡಿಸುವುದು ಹಾಗೂ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು. ಪ್ರತಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದ ಸಮಿತಿ ನಿಗದಿಪಡಿಸುವ ಒಂದು ಬೆಳೆಯಲ್ಲಿ ಮಾತ್ರ ಸ್ಪರ್ಧೆಯನ್ನು ನಡೆಸಲು ಅವಕಾಶವಿದೆ. ರಾಜ್ಯ ಮಟ್ಟದ ಬೆಳೆಸ್ಪರ್ಧೆಗೆ ನೋಂದಣಿಯಾದ ರೈತರ ಅರ್ಜಿ, ಪಹಣಿ ಪತ್ರಿಕೆ, ಖಜಾನೆ ಚಲನ್, ಇತ್ಯಾದಿಗಳ ಮೂಲ ಪ್ರತಿಗಳನ್ನು ತಕ್ಷಣವೇ ಸಂಬಂಧಿತ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಮೂಲಕ ಇಲಾಖೆಗೆ ಸಲ್ಲಿಸತಕ್ಕದ್ದು.
4. ವಿವಿಧ ಹಂತದ ಪ್ರತಿ ಬೆಳೆ ಸ್ಪರ್ಧೆಗೆ ಕನಿಷ್ಠ 15 ಪ್ರವೇಶ ಅರ್ಜಿಯನ್ನು ಕಡ್ಡಾಯವಾಗಿ ನೋಂದಾವಣಿ ಮಾಡಿಸತಕ್ಕದ್ದು. ಹಾಗೂ ಪ್ರತಿ ಬೆಳೆ ಸ್ಪರ್ಧೆಯಲ್ಲಿ ಕನಿಷ್ಠ 12 ಸ್ಪರ್ಧಾ ತಾಕುಗಳಲ್ಲಿ ಕಟಾವನ್ನು ಕಡ್ಡಾಯವಾಗಿ ನಡೆಸತಕ್ಕದ್ದು.
5. ಈ ಕೆಳಗೆ ಕಾಣಿಸಿದಂತೆ ಇಲಾಖೆಯು ನಿಗದಿಪಡಿಸಿರುವ ಗರಿಷ್ಟ ಇಳುವರಿ ಮಟ್ಟಕ್ಕಿಂತ ಹೆಚ್ಚಿನ ಇಳುವರಿ ದಾಖಲಾಗುವಂತಹ ಪ್ರಕರಣಗಳಲ್ಲಿ ಮರುಕಟಾವು ಮಾಡುವುದು ಕಡ್ಡಾಯ. ತಪ್ಪಿದಲ್ಲಿ, ಅಂತಹವುಗಳನ್ನು ಬಹುಮಾನ ನಿರ್ಣಯಿಸುವಾಗ ಕೈಬಿಡ ತಕ್ಕದ್ದು.

**ಮರು ಕಟಾವು ಕಾರ್ಯಕ್ಕೆ ನಿಗದಿಪಡಿಸಿರುವ ಗರಿಷ್ಠ ಇಳುವರಿ ಪ್ರಮಾಣದ ವಿವರ**

| ಕ್ರ.ಸಂ | ಸ್ಪರ್ಧಾ ಬೆಳೆ | ನಿಗದಿತ ಗರಿಷ್ಟ ಮಟ್ಟದ ಇಳುವರಿ ಪ್ರಮಾಣ (ಕ್ವಿಂಟಾಲ್/ಹೆಕ್ಟೇರಿಗೆ) |
|---|---|---|
| 1 | ಭತ್ತ (ನೀರಾವರಿ) | 100 |
| 2 | ಮುಸುಕಿನ ಜೋಳ (ನೀರಾವರಿ) | 90 |
| 3 | ರಾಗಿ (ಮಳೆಯಾಶ್ರಿತ) | 45 |
| 4 | ಮುಂಗಾರು ಜೋಳ (ಮಳೆಯಾಶ್ರಿತ) | 50 |
| 5 | ಹಿಂಗಾರು ಜೋಳ (ಮಳೆಯಾಶ್ರಿತ) | 25 |
| 6 | ಗೋಧಿ (ನೀರಾವರಿ) | 40 |
| 7 | ಶೇಂಗಾ (ಮಳೆಯಾಶ್ರಿತ) | 40 |
| 8 | ಸೂರ್ಯಕಾಂತಿ (ಮಳೆಯಾಶ್ರಿತ) | 25 |
| 9 | ತೊಗರಿ ಪೂರ್ಣ ಬೆಳೆ (ಮಳೆಯಾಶ್ರಿತ) | 30 |
| 10 | ಕಡಲೆ (ಮಳೆಯಾಶ್ರಿತ) | 25 |
| 11 | ಕಬ್ಬು (ನೀರಾವರಿ) | 300 ಟನ್ |

6. ಸ್ಪರ್ಧಾ ತಾಕುಗಳ ದಿನಾಂಕವನ್ನು ಕನಿಷ್ಠ ಒಂದುವಾರ ಮುಂಚಿತವಾಗಿ ಸಂಬಂಧಿತ ಮೇಲ್ವಿಚಾರಣಾ/ಕಟಾವು ತಂಡದ ಸದಸ್ಯರಿಗೆ ಕಡ್ಡಾಯವಾಗಿ ತಿಳಿಸುವುದು ಹಾಗೂ ಅವರುಗಳ ಸಮಕ್ಷಮದಲ್ಲಿ ಕಟಾವು ಕಾರ್ಯ ಕೈಗೊಳ್ಳುವುದು.

7. ಗರಿಷ್ಠ ಇಳುವರಿ ಮಟ್ಟ ಮೀರಿ ಇಳುವರಿ ದಾಖಲಾಗುವಂತಹ ಪ್ರಕರಣಗಳಲ್ಲಿ ಫೋಟೋ ಅಥವಾ ವಿಡಿಯೋ ಚಿತ್ರೀಕರಣವನ್ನು ಕಡ್ಡಾಯವಾಗಿ ಕೈಗೊಳ್ಳುವುದು ಹಾಗೂ ಬಹುಮಾನ ನಿರ್ಣಯಿಸುವ ಸಂದರ್ಭದಲ್ಲಿ ಸಮಿತಿಗೆ ಒದಗಿಸುವುದು.

8. ಇಳುವರಿ ಸಾಮರ್ಥ್ಯ ಮೀರಿ ಸ್ಪರ್ಧಾ ಬೆಳೆಗಳಲ್ಲಿ ಇಳುವರಿ ದಾಖಲಾಗುವ ಪ್ರಕರಣಗಳನ್ನು ಅನುಮಾನಾಸ್ಪದ ಇಳುವರಿಯೆಂದು ಪರಿಗಣಿಸಿ ಸ್ಪರ್ಧೆಯಿಂದ ಅನರ್ಹಗೊಳಿಸ ತಕ್ಕದ್ದು. ಸ್ಪರ್ಧಾ ಬೆಳೆಗಳ ಇಳುವರಿ ಸಾಮರ್ಥ್ಯದ ವಿವರಗಳನ್ನು ಈ ಕೆಳಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.

| ಕ್ರ.ಸಂ | ಸ್ಪರ್ಧಾ ಬೆಳೆ | ಇಳುವರಿ ಸಾಮರ್ಥ್ಯ ಗರಿಷ್ಠ ಪ್ರಮಾಣ ಕ್ವಿಂಟಾಲ್/ಹೆಕ್ಟೇರ್ |
|---|---|---|
| 1 | ಭತ್ತ (ನೀರಾವರಿ) | 180 |
| 2 | ಮುಂಗಾರು ಜೋಳ (ಮಳೆಯಾಶ್ರಿತ) | 80 |
| 3 | ರಾಗಿ (ಮಳೆಯಾಶ್ರಿತ) | 55 |
| 4 | ಮುಸುಕಿನ ಜೋಳ (ನೀರಾವರಿ) | ನಂತರ ತಿಳಿಸಲಾಗುವುದು |
| 5 | ಹಿಂಗಾರು ಜೋಳ (ಮಳೆಯಾಶ್ರಿತ) | 45 |
| 6 | ಗೋಧಿ (ನೀರಾವರಿ) | 60 |
| 7 | ತೊಗರಿ (ಮಳೆಯಾಶ್ರಿತ) | 40 |
| 8 | ಶೇಂಗಾ (ಮಳೆಯಾಶ್ರಿತ) | 60 |
| 9 | ಸೂರ್ಯಕಾಂತಿ (ಮಳೆಯಾಶ್ರಿತ) | 40 |
| 10 | ಕಡಲೆ (ಮಳೆಯಾಶ್ರಿತ) | 40 |
| 11 | ಕಬ್ಬು (ನೀರಾವರಿ) | 474 ಮೆ.ಟನ್ |

9. ಸ್ಪರ್ಧಾ ತಾಕುಗಳ ಕಟಾವು ಕಾರ್ಯ ಪೂರ್ಣಗೊಂಡ ದಿನವೇ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಕಟಾವು ನಡವಳಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ರಾಜ್ಯಮಟ್ಟದ ಸ್ಪರ್ಧೆಗೆ ಸಂಬಂಧಿಸಿದ ಕಟಾವು ನಡವಳಿಗಳನ್ನು ಕಟಾವಾದ ದಿನವೇ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳ ಮುಖಾಂತರ ಕೇಂದ್ರ ಕಾರ್ಯಾಲಯಕ್ಕೆ ತಪ್ಪದೇ ಸಲ್ಲಿಸತಕ್ಕದ್ದು. 10. ಕೆಳಹಂತದ ನಿಗದಿತ ಸ್ಪರ್ಧೆಯಲ್ಲಿ

ಬಹುಮಾನ ಪಡೆದ ರೈತರು ಮುಂದಿನ 3 ವರ್ಷಗಳ ಅವಧಿಗೆ ಆ ಹಂತದ ಬೆಳೆ ಸ್ಪರ್ಧೆಗೆ ಭಾಗವಹಿಸುವಂತಿಲ್ಲ. ಆದರೆ, ಆ ಬೆಳೆಯಲ್ಲಿ ಮೇಲಿನ ಹಂತದ ಸ್ಪರ್ಧೆಗೆ ಮಾತ್ರ ಭಾಗವಹಿಸಲು ಅವಕಾಶ ಇರುವುದನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

11. 2001-02 ನೇ ಸಾಲಿನಿಂದ ಎಲ್ಲಾ ಹಂತದ ಸ್ಪರ್ಧಾ ಬೆಳೆಯ ವಿಸ್ತೀರ್ಣವನ್ನು ಕನಿಷ್ಠ 1-00 ಎಕರೆಗೆ ಪರಿಷ್ಕರಿಸಿರುವುದನ್ನು ಗಮನಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು.

12. ವಿವಿಧ ಹಂತದ ಬೆಳೆ ಸ್ಪರ್ಧೆವಿಜೇತರಿಗೆ ಈ ಕೆಳಗೆ ಕಾಣಿಸಿದಂತೆ ಬಹುಮಾನ ಮೊತ್ತವನ್ನು ನಿಗದಿಪಡಿಸಲಾಗಿದ್ದು ಸ್ಪರ್ಧೆಯಲ್ಲಿ ಭಾಗವಹಿಸುವ ರೈತರುಗಳಿಗೆ ನೋಂದಾವಣಿ ಪೂರ್ವದಲ್ಲಿಯೇ ಈ ಕುರಿತಂತೆ ವಿವರವಾದ ಮಾಹಿತಿಯನ್ನು ನೀಡ ತಕ್ಕದ್ದು.

| ಕ್ರ ಸಂ | ಹಂತ | ಬಹುಮಾನ ಮೊತ್ತ (ರೂಪಾಯಿಗಳಲ್ಲಿ) | | |
|---|---|---|---|---|
| | | ಪ್ರಥಮ | ದ್ವಿತೀಯ | ತೃತೀಯ |
| 1 | ತಾಲ್ಲೂಕು ಮಟ್ಟ | 10000 | 5000 | 3000 |
| 2 | ಜಿಲ್ಲಾ ಮಟ್ಟ | 15000 | 10000 | 5000 |
| 3 | ರಾಜ್ಯಮಟ್ಟ | 30000 | 15000 | 10000 |

13. ಬೆಳೆ ಸ್ಪರ್ಧೆಯಲ್ಲಿ ಯಾವುದಾದರೂ ಸ್ಥಾನಕ್ಕೆ ಒಬ್ಬರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಅರ್ಹರಾದ ಸಂದರ್ಭದಲ್ಲಿ ಈ ಸ್ಥಾನಕ್ಕೆ ನಿಗದಿಪಡಿಸಲಾಗಿರುವ ಬಹುಮಾನ ಮೊತ್ತವನ್ನು ಎಲ್ಲಾ ಅರ್ಹರಿಗೂ ಸರಿಸಮನಾಗಿ ವಿತರಿಸತಕ್ಕದ್ದು.

14. ರೆವಿನ್ಯೂ ದಾಖಲೆ ಪ್ರಕಾರ ಜಮೀನು(ಖಾತೆ) ಹೊಂದಿರುವ ಹಾಗೂ ಸ್ವತಃ ಬೇಸಾಯದಲ್ಲಿ ತೊಡಗಿರುವ(ಮಾಡುತ್ತಿರುವ) ಸ್ವಯಂ ಕ್ರಿಯಾ ಶೀಲ ಕೃಷಿಕನೇ ಸ್ಪರ್ಧೆಗೆ ನೊಂದಣಿ ಮಾಡಿಸತಕ್ಕದ್ದು.

15. ಸ್ವಂತ ಜಮೀನು ಹೊಂದಿರದಿದ್ದರೂ ಸಹ ಬೇಸಾಯದಲ್ಲಿ ತೊಡಗಿರುವ ಕೃಷಿಕನು ಜಮೀನು ಮಾಲೀಕರಿಂದ ಸಾಮಾನ್ಯ ವ್ಯವಹಾರಿಕ ಅಧಿಕಾರ(ಜಿ.ಪಿ.ಎ) ಹೊಂದಿದ್ದ ಪಕ್ಷದಲ್ಲಿ(ಭೂ ಸುಧಾರಣ ಕಾಯ್ದೆಯನ್ವಯ ನಿಯಮಗಳಿಗೆ ಒಳಪಟ್ಟು) ಅಂತಹವರನ್ನು ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡುವುದು.

16. ಸರ್ಕಾರಿ ಆದೇಶ ಸಂಃ ಕೃತೋಇ.167.ಕೃಯೋಕಾ.07 ದಿಃ28-01-2008 ರಡಿ ಹೊರಡಿಸಲಾಗಿರುವ ಪರಿಷ್ಕೃತ ಮಾರ್ಗಸೂಚಿಯನ್ವಯ ಸ್ಪರ್ಧಾತ್ಮಕ ಇಳುವರಿ ಮಟ್ಟಕ್ಕೆ ಹೋಲಿಸಬೇಕು. ಈ ಕುರಿತಂತೆ ಬೆಳೆ ಸ್ಪರ್ಧೆಗೆ ಭಾಗವಹಿಸುವ ರೈತರಿಗೆ ಪೂರ್ವಭಾವಿಯಾಗಿ ಕಡ್ಡಾಯವಾಗಿ ತಿಳಿಸತಕ್ಕದ್ದು. ಈ ಮಾಹಿತಿಯನ್ನು ಸ್ಪರ್ಧಾರ್ಥಿಗಳಿಗೆ ತಿಳಿಸದಿದ್ದ ಪಕ್ಷದಲ್ಲಿ ಸಂಬಂಧಿತ ಅಧಿಕಾರಿಗಳೆನ್ನೇ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು. ರಾಜ್ಯದ ದಕ್ಷಿಣ ಮತ್ತು ಉತ್ತರ ಭಾಗದ ಜಿಲ್ಲೆಗಳಿಗೆ ಅನ್ವಯವಾಗುವಂತೆ ಸರ್ಕಾರಿ ಆದೇಶದಲ್ಲಿ ನೀಡಲಾಗಿರುವ ಬೆಳೆವಾರು ಸ್ಪರ್ಧಾತ್ಮಕ ಇಳುವರಿ ಪ್ರಮಾಣವನ್ನು ಅನುಬಂಧದಲ್ಲಿ ನೀಡಲಾಗಿದೆ.

17. ಸ್ಪರ್ಧಾರ್ಥಿಗಳ ಕೃಷಿ ತಾಂತ್ರಿಕ ಜ್ಞಾನದ ಮಟ್ಟ ಗುರುತಿಸಲು ಮೂಲ ಹಂತದಲ್ಲಿ ಪ್ರವೇಶ ಪರೀಕ್ಷೆ ಮಾಡಿ ಸಂದರ್ಶನಕ್ಕೆ ಒಳಪಡಿಸಿ ಅರ್ಹರನ್ನು ಸ್ಪರ್ಧೆಗೆ ನೊಂದಣಿ ಮಾಡಿಸುವುದು.

18. ಸ್ಪರ್ಧಾರ್ಥಿಗಳಿಂದ ದೊರೆತ ಪ್ರೇರಣೆಯನ್ನು ನೆರೆಹೊರೆಯ ರೈತರ ಮನೋಭಾವದಲ್ಲಿ ಬದಲಾವಣೆಯಾಗುವಂತೆ ಕ್ರಮ ಕೈಗೊಳ್ಳುವುದು.

19. ಸ್ಪರ್ಧಾ ತಾಕುಗಳ ಕಟಾವು ಕಾರ್ಯವನ್ನು ಕ್ರಮ ಬದ್ಧವಾಗಿ ಹಾಗೂ ಕಟ್ಟುನಿಟ್ಟಾಗಿ ತಂಡದ ಸದಸ್ಯರು ಕೈಗೊಳ್ಳತಕ್ಕದ್ದು.

20. ಪ್ರಶಸ್ತಿ ವಿಜೇತರ ಯಶೋಗಾಥೆಗಳನ್ನು ಪ್ರಕಟಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು.

## 2009-10ನೇ ಸಾಲಿನ ಕೃಷಿ ಪ್ರಶಸ್ತಿ - ರೈತರಿಗೆ ಉತ್ಪಾದನಾ ಬಹುಮಾನ - ಜಿಲ್ಲಾವಾರು ಆರ್ಥಿಕ ಕಾರ್ಯಕ್ರಮ

(ಲಕ್ಷ ರೂ.ಗಳಲ್ಲಿ)

| ಕ್ರ.ಸಂ | ಜಿಲ್ಲೆಯ ಹೆಸರು | ಭೌತಿಕ ಗುರಿ | ಆರ್ಥಿಕ ಗುರಿ |
|---|---|---|---|
| 1 | ಬೆಂಗಳೂರು(ನ) | 15 | 1.02 |
| 2 | ಬೆಂಗಳೂರು(ಗ್ರಾ) | 15 | 1.02 |
| 3 | ರಾಮನಗರ | 15 | 1.02 |
| 4 | ಕೋಲಾರ | 18 | 1.20 |
| 5 | ಚಿಕ್ಕಬಳ್ಳಾಪುರ | 21 | 1.38 |
| 6 | ತುಮಕೂರು | 33 | 2.10 |
| 7 | ಶಿವಮೊಗ್ಗ | 24 | 1.56 |
| 8 | ಚಿತ್ರದುರ್ಗ | 21 | 1.38 |
| 9 | ದಾವಣಗೆರೆ | 21 | 1.38 |
| 10 | ಮೈಸೂರು | 24 | 1.56 |
| 11 | ಚಾಮರಾಜನಗರ | 15 | 1.02 |
| 12 | ಮಂಡ್ಯ | 24 | 1.56 |
| 13 | ಕೊಡಗು | 12 | 0.84 |
| 14 | ಹಾಸನ | 27 | 1.74 |
| 15 | ಚಿಕ್ಕಮಗಳೂರು | 24 | 1.56 |
| 16 | ದ.ಕನಡ | 18 | 1.20 |
| 17 | ಉಡುಪಿ | 12 | 0.84 |
| 18 | ಧಾರವಾಡ | 18 | 1.20 |
| 19 | ಗದಗ | 18 | 1.20 |
| 20 | ಹಾವೇರಿ | 24 | 1.56 |
| 21 | ಉತ್ತರ ಕನ್ನಡ | 36 | 2.28 |
| 22 | ಬೆಳಗಾವಿ | 33 | 2.10 |
| 23 | ಬಿಜಾಪುರ | 18 | 1.20 |
| 24 | ಬಾಗಲಕೋಟೆ | 21 | 1.38 |
| 25 | ರಾಯಚೂರು | 18 | 1.20 |
| 26 | ಕೊಪ್ಪಳ | 15 | 1.02 |
| 27 | ಬಳ್ಳಾರಿ | 24 | 1.56 |
| 28 | ಗುಲ್ಬರ್ಗಾ | 33 | 2.10 |
| 29 | ಬೀದರ್ | 18 | 1.20 |
|  | ಕೇಂದ್ರ ಕಛೇರಿ | 33 | 9.62 |
|  | **ಒಟ್ಟು** | **648** | **50.00** |

**ವಿಶೇಷ ಸೂಚನೆ:** ಜಿಲ್ಲಾ ಮಟ್ಟದ ತೀರ್ಪು ಸಮಿತಿಗಳ ನಿರ್ಣಯಗಳ ಅನ್ವಯ ಅನುದಾನವನ್ನು ಒದಗಿಸಲಾಗುವುದು.

# ಅನುಬಂಧ

## ಸ್ಪರ್ಧಾ ತಾಕುಗಳಲ್ಲಿ ದಾಖಲಾಗುವ ಇಳುವರಿಯನ್ನು ಹೋಲಿಕೆ ಮಾಡುವ ಸಲುವಾಗಿ ನಿಗದಿಪಡಿಸಲಾಗಿರುವ ಪರಿಷ್ಕೃತ ಸ್ಪರ್ಧಾತ್ಮಕ ಇಳುವರಿ ಪಟ್ಟಿ

| ಕ್ರ. ಸಂ | ಬೆಳೆ | ತಾಲ್ಲೂಕು ಮಟ್ಟ ಜಿಲ್ಲಾ ಮಟ್ಟಗಳಲ್ಲಿ ಅಳವಡಿಸಬೇಕಾದ ಸ್ಪರ್ಧಾತ್ಮಕ ಇಳುವರಿ (ಕ್ವಿಂ/ಹೆ) | | ರಾಜ್ಯ ಮಟ್ಟದಲ್ಲಿ ಅಳವಡಿಸಬೇಕಾದ ಇಳುವರಿ (ಕ್ವಿಂ/ಹೆ.) |
|---|---|---|---|---|
| | | ಕೃ.ವಿ.ವಿ. ಧಾರವಾಡ ವ್ಯಾಪ್ತಿಯ ಜಿಲ್ಲೆಗಳಿಗೆ | ಕೃ.ವಿ.ವಿ. ಬೆಂಗಳೂರು ವ್ಯಾಪ್ತಿಯ ಜಿಲ್ಲೆಗಳಿಗೆ | |
| 1 | ಭತ್ತ | 20 | 30 | 30 |
| 2 | ರಾಗಿ(ಮ.ಆ) | 30 | 15 | 30 |
| 3 | ಮುಸುಕಿನ ಜೋಳ (ನೀ) | 40 | 50 | 50 |
| 4 | ಮುಂಗಾರಿ ಜೋಳ (ಮ.ಆ) | 15 | 16 | 16 |
| 5 | ಹಿಂಗಾರಿ ಜೋಳ (ಮ.ಆ) | 7.5 | 10 | 10 |
| 6 | ಗೋಧಿ (ನೀ) | 35 | 25 | 35 |
| 7 | ಸಜ್ಜೆ | 15 | 12 | 15 |
| 8 | ತೊಗರಿ(ಮ.ಆ) | 10 | 12 | 12 |
| 9 | ಕಡಲೆ (ಮ.ಆ) | 8 | 8 | 8 |
| 10 | ಶೇಂಗಾ (ಮ.ಆ) | 12 | 8 | 12 |
| 11 | ಸೂರ್ಯಕಾಂತಿ (ಮ.ಆ) | 10 | 15 | 15 |
| 12 | ಕಬ್ಬು (ನೀ) -( ಟನ್/ಹೆ.) | 88 | 70 | 88 |

**ಕೃ.ವಿ.ವಿ. ಧಾರವಾಡ ವ್ಯಾಪ್ತಿಯ ಜಿಲ್ಲೆಗಳು :** ಬೀದರ್, ಗುಲ್ಬರ್ಗಾ, ಬಿಜಾಪುರ, ರಾಯಚೂರು, ಕೊಪ್ಪಳ, ಬಾಗಲಕೋಟೆ, ಬಳ್ಳಾರಿ, ಧಾರವಾಡ, ಗದಗ, ಹಾವೇರಿ, ಬೆಳಗಾವಿ ಮತ್ತು ಉತ್ತರ ಕನ್ನಡ

**ಕೃ.ವಿ.ವಿ. ಬೆಂಗಳೂರು ವ್ಯಾಪ್ತಿಯ ಜಿಲ್ಲೆಗಳು :** ಚಿತ್ರದುರ್ಗ, ದಾವಣಗೆರೆ, ತುಮಕೂರು, ಬೆಂಗಳೂರು (ನಗರ), ಬೆಂಗಳೂರು (ಗ್ರಾಮಾಂತರ ), ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಶಿವಮೊಗ್ಗ, ಉಡುಪಿ, ಹಾಸನ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ.

# 4. ಕೃಷಿ ಪಂಡಿತ ಪ್ರಶಸ್ತಿ

## 2401-00-800-1-40 ಉಪ ಶೀರ್ಷಿಕೆ : (117)

**ಉದ್ದೇಶ:** ಕೃಷಿ ವಲಯದಲ್ಲಿ ತಮ್ಮ ಅಮೂಲ್ಯ ಅನ್ವೇಷಣೆ/ ವಿಶಿಷ್ಠ ಸಾಧನೆ ಮೂಲಕ ರೈತ ಸಮುದಾಯದ ಅಭಿವೃದ್ದಿಗೆ ಅತ್ಯುತ್ತಮ ಕೊಡುಗೆ ನೀಡುತ್ತಿರುವ ಪರಿಣಿತ ಮಹನೀಯರುಗಳನ್ನು ಗುರುತಿಸಿ ಕೃಷಿ ಪಂಡಿತ ಪ್ರಶಸ್ತಿಯನ್ನು ನಗದು ಬಹುಮಾನದೊಂದಿಗೆ ನೀಡಿ ಗೌರವಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶ.

ಕೃಷಿ ಕ್ಷೇತ್ರದಲ್ಲಿ 4 ವಿಭಾಗಗಳಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಮಹನೀಯರುಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. 1.ನೀರಿನ ಸಮರ್ಥ ಬಳಕೆ 2. ಸಾವಯವ ಕೃಷಿ 3. ಕೃಷಿ ಯಂತ್ರೋಪಕರಣಗಳ ಅಭಿವೃದ್ಧಿ 4. ಸಮಗ್ರ ಕೃಷಿ ಪದ್ಧತಿ ಮತ್ತು ಬೆಳೆ ಪದ್ಧತಿಗಳು ಮತ್ತು ಬೆಳೆ ವೈವಿಧ್ಯೀಕರಣ. ಈ ಬಹುಮಾನಗಳನ್ನು ಪ್ರತಿ ವರ್ಗಕ್ಕೆ ಮೂರು ಬಹುಮಾನಗಳಂತೆ ನೀಡಲಾಗುತ್ತದೆ.

**ಬಹುಮಾನದ ವಿವರಗಳು (ಲಕ್ಷ ರೂ.ಗಳಲ್ಲಿ)**

| ಕ್ರ.ಸಂ. | ಬಹುಮಾನಿತ ಸ್ಥಾನ | ಬಹುಮಾನ ಸಂ. | ಬಹುಮಾನ ಮೊತ್ತ | ಒಟ್ಟು ಬಹುಮಾನದ ಮೊತ್ತ |
|---|---|---|---|---|
| 1. | ಪ್ರಥಮ | 4 | 1.00 | 4.00 |
| 2. | ದ್ವಿತೀಯ | 4 | 0.50 | 2.00 |
| 3. | ತೃತೀಯ | 4 | 0.25 | 1.00 |
| 3. | ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿ ಪ್ರದಾನ ಸಮಾರಂಭದ ವೆಚ್ಚ | - | - | 6.00 |
| | **ಒಟ್ಟು** | **12** | | **13.00** |

ಕೃಷಿ ಮತ್ತು ತೋಟಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಅಧ್ಯಕ್ಷರಾಗಿರುವ ರಾಜ್ಯಮಟ್ಟದ ಕೃಷಿ ಪಂಡಿತ ಪ್ರಶಸ್ತಿ ಆಯ್ಕೆ ಸಮಿತಿಯು ಪ್ರಶಸ್ತಿ ವಿಜೇತರನ್ನು ಆಯ್ಕೆ ಮಾಡುತ್ತದೆ.

ಪ್ರಥಮ ಸ್ಥಾನಕ್ಕೆ - ಕನಿಷ್ಠ 90 ಅಂಕ, ದ್ವಿತೀಯ ಸ್ಥಾನಕ್ಕೆ - 80 ರಿಂದ 89 ಅಂಕ, ತೃತೀಯ ಸ್ಥಾನಕ್ಕೆ - 65 ರಿಂದ 79 ಅಂಕ (ಕನಿಷ್ಠ 65 ಅಂಕ ಪಡೆದಿರಲೇಬೇಕೆಂದು ನಿಗದಿಪಡಿಸಲಾಗಿದೆ). ಆಯಾ ವಿಭಾಗಗಳಲ್ಲಿ 90ಕ್ಕಿಂತ ಹೆಚ್ಚಿಗೆ ಅಂಕ ಪಡೆದವರು 80 ರಿಂದ 89 ಅಂಕ ಪಡೆದವರು ಹಾಗೂ 65 ರಿಂದ 79 ಮಿತಿಯಲ್ಲಿ ಸಮಾನ ಅಂಕ ಪಡೆದವರು ಒಬ್ಬರಿಗಿಂತ ಹೆಚ್ಚಿಗೆಯಿದ್ದ ಪ್ರಕರಣಗಳಲ್ಲಿ ಆಯಾ ಬಹುಮಾನದ ಸ್ಥಾನ ನೀಡಿ ಆಯಾ ಸ್ಥಾನದ ಬಹುಮಾನ ಮೊತ್ತವನು ಮಾತ್ರ ಸರಿಸಮನಾಗಿ ನೀಡಲಾಗುವುದು. ನಿಗದಿತ ಬಹುಮಾನದ ಮೊತ್ತಕ್ಕಿಂತ ಹೆಚ್ಚಿಗೆ ಮೊತ್ತದ ಬಹುಮಾನ ನೀಡಲು ಅವಕಾಶ ಇರುವುದಿಲ್ಲ.

# ಜಿಲ್ಲೆಗಳ ಕಾರ್ಯಚಟುವಟಿಕೆಗಳ ವೇಳಾಪಟ್ಟಿ( Calender of Activities)

| | **ಯೋಜನೆಯ ಹೆಸರು ಃ ವಾರ್ತಾ ಘಟಕ (ಎಸ್ - 17)** | | | | | | **ಲೆಕ್ಕ ಶೀರ್ಷಿಕೆ: 2401-00-109-0-21(059)** | | | | | | |
|---|---|---|---|---|---|---|---|---|---|---|---|---|---|
| **ಕಾರ್ಯಕ್ರಮ ಅನುಷ್ಠಾನಗೊಳಿಸಲು ವೇಳಾಪಟ್ಟಿ** | | | | | | | | | | | | | |
| ಕ್ರ. ಸಂ | **ಘಟಕ/ಚಟುವಟಿಕೆಗಳು/** | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ಜನವರಿ | ಫೆಬ್ರವರಿ | ಮಾರ್ಚ್ |
| 1 | ಹಸ್ತ ಪತ್ರಿಕೆಗಳ ಮುದ್ರಣ | | √ | √ | | | | | | √ | √ | | |
| 2 | ಭಿತ್ತಿ ಪತ್ರಗಳ ಮುದ್ರಣ | | | √ | | | | √ | | | √ | | |
| 3 | ಕಿರು ಪುಸ್ತಕಗಳ ಮುದ್ರಣ | | | | | | | √ | | | | √ | |
| 4 | ಪತ್ರಿಕಾ ಪ್ರಕಟಣೆಗಳು | √ | √ | √ | √ | √ | √ | √ | √ | √ | √ | √ | √ |
| 5 | ಪತ್ರಿಕಾ ಪ್ರತಿನಿಧಿಗಳ ಪ್ರವಾಸ | | | | | √ | | | | | | | |
| 6 | ರೈತರಿಗೆ ಸಲಹೆ | √ | √ | √ | √ | √ | √ | √ | √ | √ | √ | √ | √ |
| 7 | ಕ್ಷೇತ್ರೋತ್ಸವಗಳನ್ನು ಏರ್ಪಡಿಸುವುದು | | | | | | √ | √ | | | √ | √ | |
| 8 | ದೂರದರ್ಶನ ಕೇಂದ್ರದ ಮೂಲಕ ಕಾರ್ಯಕ್ರಮ ಏರ್ಪಡಿಸುವುದು | | | | | √ | | | | | | | |

# ಜಿಲ್ಲೆಗಳ ಕಾರ್ಯಚಟುವಟಿಕೆಗಳ ವೇಳಾಪಟ್ಟಿ( Calender of Activities)

| | ಯೋಜನೆಯ ಹೆಸರು : ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ (S- 19) | ಲೆಕ್ಕ ಶೀರ್ಷಿಕೆ : 2401-00-109-0-21(051) | | | | | | | | | | | |
|---|---|---|---|---|---|---|---|---|---|---|---|---|---|
| ಸ ಂ. | ಘಟಕ/ಚಟುವಟಿಕೆಗಳು/ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ಜನವರಿ | ಫೆಬ್ರವರಿ | ಮಾರ್ಚ್ |
| 1 | ಕೃಷಿ ಮೇಳ -2009 ಧಾರವಾಡ (ಜಂ.ಕೃ.ನಿ, ಧಾರವಾಡ ಜಿಲ್ಲೆ ) | | | | | | √ | | | | | | |
| 2 | ಕೃಷಿ ಮೇಳ -2009 ಬೆಂಗಳೂರು (ಜಂ.ಕೃ.ನಿ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳು ) | | | | | | | | √ | | | | |
| 3 | ಮೈಸೂರು ದಸರಾ ವಸ್ತು ಪ್ರದರ್ಶನ (ಜಂ.ಕೃ.ನಿ, ಮೈಸೂರು ) | | | | | | | √ | | | | | |
| 4 | ಕನ್ನಡ ರಾಜ್ಯೋತ್ಸವ (ಜಂ.ಕೃ.ನಿ, ಬೆಂಗಳೂರು ಗ್ರಾಮಾಂತರ) | | | | | | | | √ | | | | |
| 5 | ವಿಶ್ವ ಆಹಾರ ದಿನಾಚರಣೆ (ಎಲ್ಲಾ ಜಿಲ್ಲಾ ಜಂ.ಕೃ.ನಿ.ಗಳಿಗೆ ) | | | | | | | √ | | | | | |
| 6 | ರೈತರ ದಿನಾಚರಣೆ (ಎಲ್ಲಾ ಜಿಲ್ಲಾ ಜಂ.ಕೃ.ನಿ.ಗಳಿಗೆ ) | | | | | | | | | √ | | | |
| 7 | ಸಿದ್ದಗಂಗಾ ಜಾತ್ರೆ ಮತ್ತು ವಸ್ತು ಪ್ರದರ್ಶನ (ಜಂ.ಕೃ.ನಿ. ತುಮಕೂರು ) | | | | | | | | | | | √ | |
| 8 | ಕೃಷಿ ಮೇಳ, ಹಾಸನ (ಜಂ.ಕೃ.ನಿ. ಹಾಸನ ) | | | | | | | | | √ | | | |
| 9 | ಕೃಷಿ ಮೇಳ/ವಸ್ತು ಪ್ರದರ್ಶನಗಳು/ಜಾತ್ರೆಗಳು (ಎಲ್ಲಾ ಜಿಲ್ಲೆಗಳು) | | | | | | | | √ | √ | √ | √ | |

## ಜಿಲ್ಲೆಗಳ ಕಾರ್ಯಚಟುವಟಿಕೆಗಳ ವೇಳಾಪಟ್ಟಿ( Calender of Activities)

| | ಯೋಜನೆಯ ಹೆಸರು ಃ ಕೃಷಿ ಉತ್ಪಾದನಾ ಬಹುಮಾನಗಳು (S- 25) | ಲೆಕ್ಕ ಶೀರ್ಷಿಕೆ : 2401-00-800-1-40 ಉ.ಶೀ. (117) | | | | | | | | | | | |
|---|---|---|---|---|---|---|---|---|---|---|---|---|---|
| ಸಂ. | ಘಟಕ/ಚಟುವಟಿಕೆಗಳು/ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ | ನವೆಂಬರ್ | ಡಿಸೆಂಬರ್ | ಜನವರಿ | ಫೆಬ್ರವರಿ | ಮಾರ್ಚ್ |
| 1 | 2008-09ನೇ ರಾಜ್ಯ ಮಟ್ಟದ ಬೆಳೆಸ್ಪರ್ಧೆ ಕಟಾವು ನಡವಳಿಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು | √ | √ | | | | | | | | | | |
| 2 | 2008-09ನೇ ತಾಲ್ಲೂಕು ಮಟ್ಟ/ಜಿಲ್ಲಾ ಮಟ್ಟದ ವಿಜೇತರನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡುವುದು. | | √ | | | | | | | | | | |
| 3 | 2008-09ನೇ ಸಾಲಿನ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ನಡವಳಿ ಕೇಂದ್ರ ಕಛೇರಿಗೆ ಸಲ್ಲಿಸುವುದು. | | | √ | | | | | | | | | |
| 4 | 2008-09ನೇ ಸಾಲಿನ ರಾಜ್ಯ ಮಟ್ಟದ ಬೆಳೆ ಸ್ಪರ್ಧೆ ಇಳುವರಿ ಮಾಹಿತಿ ಕ್ರೋಡೀಕರಣ | | | √ | | | | | | | | | |
| 5 | 2008-09ನೇ ಸಾಲಿನ ರಾಜ್ಯ ಮಟ್ಟದ ಆಯ್ಕೆ ಸಮಿತಿಯಿಂದ ರಾಜ್ಯ ಮಟ್ಟದ ಬೆಳೆ ಸ್ಪರ್ಧೆ ವಿಜೇತರ ಆಯ್ಕೆ | | | | √ | √ | | | | | | | |
| 6 | 2009-10ನೇ ಸಾಲಿನ ಮುಂಗಾರು ಬೆಳ ಸ್ಪರ್ಧೆಗೆ ಅರ್ಜಿಗಳ ನೋಂದಣಿ (ರಾಜ್ಯ, ಜಿಲ್ಲಾ ಹಾಗು ತಾಲ್ಲೂಕು) | | | | √ | √ | | | | | | | |
| 7 | 2008-09ನೇ ಸಾಲಿನ ರಾಜ್ಯ, ಜಿಲ್ಲಾ ಹಾಗು ತಾಲ್ಲೂಕು ಮಟ್ಟದ ಬಹುಮಾನ ವೆಚ್ಚವನ್ನು ಭರಿಸುವುದು | | | | | | | √ | | | | | |
| 8 | 2009-10ನೇ ಸಾಲಿನ ಹಿಂಗಾರು ಬೆಳೆ ಸ್ಪರ್ಧೆ ಅರ್ಜಿಗಳ ಸ್ವೀಕೃತಿ (ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು) | | | | | | | | √ | | | | |

| | | | | | | | | | | | | | |
|---|---|---|---|---|---|---|---|---|---|---|---|---|---|
| 9 | 2009-10ನೇ ಸಾಲಿನ ಎಲ್ಲಾ ಹಂತದ ಮುಂಗಾರು ಬೆಳೆ ಸ್ಪರ್ಧೆ ಕಟಾವು ಕಾರ್ಯ | | | | | | | √ | √ | √ | | | |
| 10 | 2008-09ನೇ ಸಾಲಿನ ಕೃಷಿ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸುವುದು. | | | | | | | | | √ | | | |
| 11 | 2009-10ನೇ ಸಾಲಿನ ಎಲ್ಲಾ ಹಂದತ ಹಿಂಗಾರು ಬೆಳೆ ಸ್ಪರ್ಧೆ ಕಟಾವು ಕಾರ್ಯ. | | | | | | | | | √ | √ | √ | √ |
| | **ಕೃಷಿ ಪಂಡಿತ ಪ್ರಶಸ್ತಿ** | | | | | | | | | | | | |
| 1 | 2008-09ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸುವುದು. | √ | | | | | | | | | | | |
| 2 | 2008-09ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಯ ನಿಗದಿತ ನಮೂನೆಯಲ್ಲಿ ರೈತರಿಂದ ಅರ್ಜಿಗಳನ್ನು ಸ್ವೀಕರಿಸುವುದು. | | √ | √ | | | | | | | | | |
| 3 | ಕೃಷಿ ಪಂಡಿತ ಪ್ರಶಸ್ತಿ ಕಾರ್ಯತಂಡದಿಂದ ಅರ್ಜಿಗಳ ಪರಿಶೀಲನೆ, ಪರಿಷ್ಕರಣೆ ಮತ್ತು ಕ್ರೋಡೀಕರಣ. | | | | √ | | | | | | | | |
| 4 | ಅಂತಿಮವಾಗಿ ಆಯ್ಕೆಗೊಂಡ ರೈತರಕ್ಷೇತ್ರಗಳಿಗೆ ಕಾರ್ಯತಂಡದ ಭೇಟಿ | | | | | | √ | √ | | | | | |
| 5 | ಅಧ್ಯಕ್ಷರು, ಆಯ್ಕೆ ಸಮಿತಿ ರವರಿಗೆ ಕಾರ್ಯತಂಡದ ವರದಿಯನ್ನು ಸಲ್ಲಿಸುವುದು | | | | | | | | √ | | | | |
| 6 | 2008-09ನೇ ಸಾಲಿನ ಆಯ್ಕೆ ಸಮಿತಿಯಿಂದ ಕೃಷಿ ಪಂಡಿತ ಪ್ರಶಸ್ತಿ ವಿಜೇತರ ಆಯ್ಕೆ | | | | | | | | √ | | | | |
| 7 | 2008-09 ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸುವುದು. | | | | | | | | | √ | | | |